
ಅಹರ್ನಿಶಂ ಜಾಗರಣೀಯಂ ಲೋಕಹಿತಂ ಮಮ ಕರಣೀಯಂ

# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ



ಬೆಂಗಳೂರು: ಸಾಹಿತ್ಯ ಸಂಗಮದ ವತಿಯಿಂದ ಪ್ರಕಟಿಸಲಾಗಿರುವ 'ಹಿಂದುತ್ವ: ವರ್ತಮಾನದ ಸಂದರ್ಭದಲ್ಲಿ ಹಿಂದುತ್ವದ ಪ್ರಸ್ತುತತೆ' ಪುಸ್ತಕವನ್ನು ಖ್ಯಾತ ಕ್ಯಾನ್ಸರ್ ತಜ್ಞೆ, ಪದ್ಮಶ್ರೀ ಪುರಸ್ಕೃತೆ ಡಾ. ವಿಜಯಲಕ್ಷ್ಮೀ ದೇಶಮಾನೆ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ದಕ್ಷಿಣ ಪ್ರಾಂತ ಸಂಘಚಾಲಕ ಜಿ.ಎಸ್. ಉಮಾಪತಿ, ಪ್ರಜ್ಞಾ ಪ್ರವಾಹದ ಅಖಿಲ ಭಾರತೀಯ ಸಹ ಸಂಯೋಜಕ ರಘುನಂದನ ಅವರು ಶಂಕರಪುರಂನ ಉತ್ತುಂಗ ಸಭಾಂಗಣದಲ್ಲಿ ಲೋಕಾರ್ಪಣೆ ಮಾಡಿದರು.

ಸಂಪುಟ : 46 | ಸಂಚಿಕೆ : 23 | ಕ್ರೋಧಿ – ಚೈತ್ರ | ಕಲಿಯುಗಾಬ್ದ 5127 | 01–04–2025 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4

# ನವಭಾರತದ ನಿರ್ಮಾಣಕ್ಕೆ ಬಾಬಾಸಾಹೇಬರ ಭದ್ರಬುನಾದಿ

ಪ್ರತಿವರ್ಷ ಏಪ್ರಿಲ್ 14ರ ದಿನ ಭಾರತ ಮಾತ್ರವಲ್ಲದೆ, ಜಗತ್ತು ಕೂಡ ವಿಶ್ವ ಜ್ಞಾನ ದಿನದ ಮೂಲಕ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರನ್ನು ಸ್ಮರಿಸಿಕೊಳ್ಳುತ್ತದೆ. ಎಷ್ಟೋ ಜನ ಸಾಮಾಜಿಕ ಸಮಾನತೆಗಾಗಿ ಸಮ– ಸಮಾಜದ ಸೃಷ್ಟಿಗಾಗಿ ಹೋರಾಟ ಮಾಡಿದ ಮಹಾಪುರುಷರ ಐತಿಹಾಸಿಕ ದಾಖಲೆ ನಮಗೆ ಸಿಗುತ್ತದೆ. ಆದರೆ, ಸಾಮಾಜಿಕ ಸಮಾನತೆ ಎಂಬುದನ್ನು ಸಾಂವಿಧಾನಿಕ ಹಕ್ಕನ್ನಾಗಿ ಮಾರ್ಪಡಿಸಿದ ಹಾಗೂ ಅಸಮಾನತೆಯ ಆಚರಣೆಗೆ ಕಾನೂನಿನ ಅಡಿಯಲ್ಲಿ ಶಿಕ್ಷೆ ಗುರಿಪಡಿಸಿದ ಕಾರಣಕ್ಕಾಗಿ, ಅಂಬೇಡ್ಕರರನ್ನು ಸಮ–ಸಮಾಜದ ದಿಸೆಯಲ್ಲಿ ನಿಂತು ನೋಡುವ ಎಲ್ಲರೂ ತಮ್ಮೊಳಗೆ ಆತ್ಮಾರ್ಪಿಸಿಕೊಳ್ಳುತ್ತಾರೆ.

ಇಂಥ ವಿಶೇಷ ದಿನದಂದು ಸಾಮಾಜಿಕ ಅಸಮಾನತೆ ಸಂಪೂರ್ಣ ನಾಶವಾಗಿದೆ, ಜಾತೀಯತೆ ಕಣ್ಮರೆಯಾಗಿದೆ ಎಂದು ಎದೆಯುಬ್ಬಿಸಿ ಹೇಳಲು ಸಾಧ್ಯವಾಗದೇ ಇರಬಹುದು, ಆದರೆ ಸಮ–ಸಮಾಜದ ನಿರ್ಮಾಣದ ಕಾರ್ಯ ಆಶಾದಾಯಕ ನೆಲಗಟ್ಟಿನಲ್ಲಿ ಸ್ಥಾಪಿತವಾಗಿರುವುದನ್ನೂ, ಅಸ್ಪೃಶ್ಯತೆ ಆಚರಣೆಗೆ ಬೆನ್ನು ತೋರಿಸುವವರ ಸಂಖ್ಯೆ ಹಿರಿದಾದದ್ದನ್ನು ಅವಿತಿಡಲು ಸಾಧ್ಯವಿಲ್ಲ. ದೇಶ ಇಂತಹ ಸಕಾರಾತ್ಮಕ ಪಥದಲ್ಲಿ ಸಾಗಲು ಸಾಧ್ಯವಾದದ್ದು, ಅಂಬೇಡ್ಕರರ ಸಾಂವಿಧಾನಿಕ ಶಕ್ತಿಯಿಂದ ಎಂಬುದು ನಿರ್ವಿವಾದ. ಈ ದೆಸೆಯಲ್ಲಿ ಶೋಷಿತರು, ಅಬಲರು, ತಳಸಮುದಾಯಗಳು ಈ ದಿನವನ್ನು ಅತ್ಯಂತ ಪೂಜ್ಯ ಭಾವನೆಯಿಂದ ಸ್ಮರಿಸುವ, ಆಚರಿಸುವ, ಮುಂದುವರಿದು ಪೂಜೆಗೈವ ಸಂಗತಿಗಳು ಕಾಣಸಿಗುತ್ತವೆ.

ಇಂದು ಪ್ರಜ್ಞಾವಂತ ಮನಸ್ಥಿತಿಯುಳ್ಳ ಸರ್ವರೂ ಅಂಬೇಡ್ಕರರ ಸಮಾಜಪರ ಕೊಡುಗೆಗಳನ್ನು ಅಭಿನಂದಿಸಿರುತ್ತಾರೆ. ಹಾಗಾದರೆ, ಈ ದಿವಸ ಕೇವಲ ಸ್ಮರಣೆ ಮತ್ತು ಅಭಿನಂದನೆಗೆ ಸೀಮಿತವಾದರೆ, ಅದು ಅಂಬೇಡ್ಕರರಿಗೆ ಮಾಡುವ ಅಪಮಾನವೇ ಸರಿ. ಕಾರಣವಿಷ್ಟೇ, ಅಂಬೇಡ್ಕರರ ನೈಜ ಆಶಯಗಳನ್ನು ಅವರ ಇರುವಿಕೆಯ ನಂತರ ಹಿಮ್ಮುಖವಾಗಿ ಬಿಂಬಿಸುವ ಕೆಲಸ ನಿರಂತರವಾಗಿ ಸಾಗುತ್ತಲೇ ಬಂದಿದೆ. ಅಂಬೇಡ್ಕರರು ಸಮಾಜದ ಭಾಗವಾಗಬೇಕೆನಿಸಿದ್ದ ಅನೇಕ ಸಂಗತಿಗಳನ್ನು, ವಿರುದ್ಧ ದಿಕ್ಕಿನಲ್ಲಿ ತೋರುವ ಮೂಲಕ ಯುವ ಸಮುದಾಯದಲ್ಲಿ ಗೊಂದಲ ಮತ್ತು ಅಸತ್ಯದ ಅಂಬೇಡ್ಕರರನ್ನು ಅನುಸರಿಸುವಂತೆ ಅಪವ್ಯಾಖ್ಯಾನ ಮಾಡುತ್ತಲೇ ಬಂದಿದ್ದಾರೆ.

## ಅಖಂಡ ಭಾರತದ ಪ್ರತಿಪಾದಕ ಡಾ.ಬಿ.ಆರ್.ಅಂಬೇಡ್ಕರ್

ಭಾರತದ ಅಖಂಡತೆಯನ್ನು ಅನೇಕರು, ಪ್ರತಿಪಾದನೆ ಮಾಡಿದ್ದು ದಿಟವೇ ಆದರೂ, ಭಾರತ ಪ್ರಕೃತಿದತ್ತವಾಗಿಯೇ ಅಖಂಡವಾದುದ್ದು ಎಂದು ಸಾರಿದ ಮೊದಲಿಗ ಮತ್ತು ಏಕೈಕ ರಾಷ್ಟ್ರೀಯವಾದಿ ಅದು ಬಾಬಾ ಸಾಹೇಬ್ ಅಂಬೇಡ್ಕರ್ ಮಾತ್ರ. ಆದಾಗಿಯೂ ಅಂಬೇಡ್ಕರರ ರಾಷ್ಟ್ರಪ್ರೇಮದ ಸಂಕಲ್ಪವನ್ನು ಮರೆಮಾಚುವ ಪ್ರಯತ್ನಗಳು, ನಡವಳಿಕೆಗಳು ನಿರಂತರವಾಗಿ ಮುನ್ನೆಲೆಗೆ ಬರುತ್ತಿರುತ್ತವೆ. ಇದಕ್ಕೆ ನಿದರ್ಶನವೆಂಬಂತೆ ಭಾರತದಲ್ಲಿ ಆಗಾಗ ನಡೆಯುವ ರಾಷ್ಟ್ರದ ಸಾರ್ವಭೌಮತೆಗೆ ಧಕ್ಕೆಯನ್ನುಂಟುಮಾಡುವ ಹೋರಾಟಗಳಲ್ಲಿಯೂ ಅಂಬೇಡ್ಕರ್‌ರ ಭಾವಚಿತ್ರವನ್ನು ಬಳಸಲಾಗುತ್ತದೆ. ಇದು ವಿಪರ್ಯಾಸ ಅಷ್ಟೇ ಅಲ್ಲ – ಹಿಡನ್ ಅಜೆಂಡವೂ ಹೌದು. ಪ್ರಾದೇಶಿಕವಾದ, ಪ್ರತ್ಯೇಕತೆಯ ಅಮಲನ್ನು ಯುವ ಜನತೆಗೆ ವಾಮ ಮಾರ್ಗದ ಮೂಲಕ ತುಂಬುವ ಒಂದು ವರ್ಗ ಅದರ ಬಹುದೊಡ್ಡ ಅಸ್ತ್ರವನ್ನಾಗಿ ಅಂಬೇಡ್ಕರರನ್ನು ಬಳಸುವುದು ಆಧುನಿಕ ಭಾರತದ ವೈರುಧ್ಯಗಳಲ್ಲಿ ಅಗ್ರಗಣ್ಯವಾದದ್ದು.

ಅಪ್ರತಿಮ ರಾಷ್ಟ್ರಭಕ್ತರಾದ ಅಂಬೇಡ್ಕರರನ್ನು ಒಡಕಿನ, ದೇಶ ವಿರೋಧ ಹೋರಾಟಗಳಲ್ಲಿ ಪ್ರೇರಕ ಶಕ್ತಿಯಂತೆ ಬಿಂಬಿಸಲಾಗುತ್ತಿದೆ, ಈ ನಿಟ್ಟಿನಲ್ಲಿ ಅಂಬೇಡ್ಕರರು ಸಮಾಜಕ್ಕೆ ಮುಟ್ಟಿಸಬೇಕೆಂದಿದ್ದ ಅಂತರಾಳದ ಸಂಗತಿಗಳನ್ನು ಅವಲೋಕಿಸುವುದು ಜರೂರು. ಅಂತಹ ಅಪವ್ಯಾಖ್ಯಾನಗಳನ್ನು ಸಂಶೋಧಿತ ಪರಾಮರ್ಶೆಯ ಮುಖಾಂತರ ಒಡೆದು ಉರುಳಿಸುವ ಹೊಣೆಗಾರಿಕೆಯು ರಾಷ್ಟ್ರೀಯತೆಯ ಆರಾಧಕರ ಮೇಲೆಯೇ ಇದೆ.



ಡಾ|| ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತಿ

ಉದಾಹರಣೆಗೆ, ಸಕಲವು ರಾಷ್ಟ್ರ ಪ್ರಾಧಾನ್ಯತೆಯನ್ನೇ ಹೊಂದಬೇಕು. ಡಿಸೆಂಬರ್ 17, 1946ರಂದು ತಮಗೆ ಸಂವಿಧಾನ ರಚನಾ ಸಭೆಯಲ್ಲಿ ಮಾತನಾಡಲು ದೊರಕಿದ ಪ್ರಥಮ ಅವಕಾಶದಲ್ಲಿ ತಮ್ಮ ಪ್ರತಿಪಾದನೆಯುದ್ದಕ್ಕೂ ಭಾರತಕ್ಕೆ ರಚನೆಯಾಗುವ ಹೊಸ ಸಂವಿಧಾನ ಸರ್ವಪಥದಲ್ಲೂ ಭಾರತದ ಸ್ಥಿರತೆಯ ದೃಷ್ಟಿಕೋನವನ್ನು ತನ್ನ ಆದ್ಯತೆಯ ಚೌಕಟ್ಟನ್ನಾಗಿ ಮಾಡಿಕೊಳ್ಳಬೇಕು ಎಂದು ಪ್ರತಿಪಾದಿಸಿದ್ದರು. ರಾಷ್ಟ್ರದ ಗುರಿಯನ್ನು ಗುರುತು ಮಾಡುವಾಗ ವ್ಯಕ್ತಿಗಳ ಪಕ್ಷಗಳ ಗುರುತನ್ನು ಪರಿಗಣಿಸಬಾರದು, ಪ್ರತಿಯೊಂದಕ್ಕೂ ರಾಷ್ಟ್ರವನ್ನೇ ಪ್ರಧಾನವಾಗಿ ಸ್ವೀಕರಿಸಬೇಕು ಎಂದು ಅಭಿಪ್ರಾಯಪಟ್ಟಿದ್ದರು. ಭಾರತವನ್ನು ವಿಭಜಿಸುವುದು ಎಂದರೆ ಕೇವಲ ವಿಭಜನೆ ಅಲ್ಲ, ಅದು ಭಾರತದ ಒಂದು ಭಾಗವನ್ನು ಕತ್ತರಿಸಿ ಕೊಡುವುದು ಎಂದರ್ಥ. ಹಾಗಾಗಿ ಭಾರತ ಐಕ್ಯವಾಗಿರಬೇಕೆ ಹೊರತು ಇಬ್ಭಾಗವಾಗಬಾರದು ಎಂದಿದ್ದರು. (ಆಧಾರ: ಸಂವಿಧಾನ ರಚನಾ ಸಭೆಯ ಚರ್ಚೆಗಳು ಪುಟ ಸಂಖ್ಯೆ 150 ಸಂಪುಟ –1)

## 13 ಸಂವಿಧಾನ ರಚನೆಯ ಉಪ ಸಮಿತಿಗಳಲ್ಲಿ ಅಂಬೇಡ್ಕರರನ್ನು ನಿರ್ಲಕ್ಷಿಸಲಾಗಿತ್ತು.

ಸಂವಿಧಾನ ರಚನೆಯ ಆರಂಭದ ಕಾಲಘಟ್ಟದಲ್ಲಿ ಅಂಬೇಡ್ಕರ್‌ರನ್ನು ಕೇವಲ ಅಧಿಕಾರ ರಹಿತ ಸದಸ್ಯನಾಗಿ ಮಾಡಿದ್ದಾಗಿಯೂ ಭಾವಿ ಸಂವಿಧಾನವು ಭಾರತೀಯತೆಯನ್ನು ಬಿಟ್ಟು ತನ್ನ ಚೌಕಟ್ಟು ಸೃಷ್ಟಿ ಮಾಡಿಕೊಳ್ಳದಂತೆ ಜಾಗೃತೆವಹಿಸಿದ್ದ ಕೀರ್ತಿ ಅಂಬೇಡ್ಕರ್ ಅವರಿಗೆ ಸಲ್ಲುತ್ತದೆ. ಆಗಸ್ಟ್ 29, 1947ಕ್ಕೆ ಅಂಬೇಡ್ಕರ್‌ರನ್ನು ಸಂವಿಧಾನ ರಚನಾ ಸಭೆಯು ಕರಡು ರಚನಾ ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡುವ ದಿವಸಕ್ಕಿಂತ ಮುಂಚೆ 265 ದಿನಗಳ ಸಂವಿಧಾನ ರಚನೆಯ ಪ್ರಾರಂಭದ ದಿನಗಳಲ್ಲಿ ರಚಿತವಾದ 13 ಉಪ ಸಮಿತಿಗಳಲ್ಲಿ ಅಂಬೇಡ್ಕರರಿಗೆ ಅಧ್ಯಕ್ಷೀಯ ಸ್ಥಾನವಿರಲಿ, ಸದಸ್ಯರಾಗಿಯೂ ಅವಕಾಶ ನೀಡಿರಲಿಲ್ಲ. (ಆಧಾರ– ಸಂವಿಧಾನ ರಚನಾ ಸಭೆಯ ಚರ್ಚೆಗಳು, ಡಿಸೆಂಬರ್ 23 /1946 ಪುಟ ಸಂಖ್ಯೆ, 245, 246, 247 ಸಂಪುಟ –1)

## ಆರ್ಯ ಅನಾರ್ಯ ಸಿದ್ಧಾಂತ ತಿರಸ್ಕರಿಸಿದ್ದರು.

ಆರ್ಯ ಜನಾಂಗವು ಭಾರತದ ಮೇಲೆ ದಾಳಿ ಮಾಡಿ ಅಲ್ಲಿನ ಮೂಲ ನಿವಾಸಿಗಳನ್ನು ದಾಸ್ಯಕ್ಕೆ ದೂಡಿದರು ಎಂಬುದಕ್ಕೆ ಯಾವ ಆಧಾರವಿದೆ? ಆರ್ಯರು ಹೊರಗಿನಿಂದ ಬಂದವರು ಎನ್ನುವುದಕ್ಕೆ ಲವಲೇಶದ ಆಧಾರವೂ ಇಲ್ಲ, ಆರ್ಯ– ದ್ರಾವಿಡ ಸಿದ್ಧಾಂತವು ಎಂದೋ ಸತ್ತು ಹೋಗಬೇಕಿತ್ತು ಎಂದು ತಿಳಿಸಿದರು. (ಆಧಾರ– ಅಂಬೇಡ್ಕರ್ ಅವರ ಬದುಕು ಬರೆಹಗಳು ಮತ್ತು ಭಾಷಣಗಳು, ಪುಟ ಸಂಖ್ಯೆ 68, ಸಂಪುಟ– 6)

ಬೌದ್ಧ ಮತದಲ್ಲಿ ಇರುವ ಜಾತಿ ಮತ್ತು ಪಂಥಗಳನ್ನು ತಿರಸ್ಕರಿಸಿದ್ದರು.

ಅಕ್ಟೋಬರ್ 13, 1956ರಂದು ಬೌದ್ಧ ಮತದ ಕುರಿತು ಅವರ ಭಾಷಣದಲ್ಲಿ "I will accept and follow the teachings of Buddha. I will keep my people away from the different opinions of Hinayana and Mahayana, Our Buddhism is Navayana." ಎಂಬ ಸಂದೇಶ ಕೊಟ್ಟಿದ್ದರು.

## ಆರ್‌ಎಸ್‌ಎಸ್ ಶ್ಲಾಘಿಸಿದ್ದ ಅಂಬೇಡ್ಕರರು.

12–05–1939 ಪುಣೆಯ ಭಾವೆ ಶಾಲೆ ಆವರಣದಲ್ಲಿ, "ಈ ಶಿಬಿರದಲ್ಲಿ ನನಗೆ ನಿಮ್ಮ ನಡೆ–ನುಡಿ, ಶಿಸ್ತು, ಸಂಯಮ, ಕಾರ್ಯ, ಸಮಯ ಪಾಲನೆ ನೋಡಿ ಸೈನಿಕರ ನೆನಪಾಗಿದೆ. ಸಂಘದ ಕಾರ್ಯ ಆದರ್ಶವಾದದ್ದು" ಎಂದಿದ್ದರು. (ಆಧಾರ: ಅಂಬೇಡ್ಕರರೇ ಸ್ಥಾಪಿಸಿದ್ದ ಎಸ್ಸಿ ಫೆಡರೇಶನ್ ರಾಜಕೀಯ ಪಕ್ಷದಿಂದ ಸಂಸತ್ ಸದಸ್ಯರಾಗಿ ಆಯ್ಕೆಯಾಗಿದ್ದ ಬಾಳಾಸಾಹೇಬ್ ಸಾಳುಂಕೆ ಅವರ ದಿನಚರಿ ಆಧರಿಸಿದ ಹಮಾರೇ ಸಾಹೇಬ್ ಪುಸ್ತಕ)

## ಜಾತ್ಯಾತೀತತೆಯನ್ನು ಸಂವಿಧಾನದ ಒಳಬಿಡಲು ಸಾಧ್ಯವಿಲ್ಲವೆಂದಿದ್ದರು.

ಜಾತ್ಯಾತೀತತೆಯನ್ನು ಸಂವಿಧಾನದ ಭಾಗವಾಗಬೇಕೆಂದು ಪ್ರೊ ಕೆ.ಟಿ ಷಾ ಮಂಡಿಸಿದ್ದ ತಿದ್ದುಪಡಿಯನ್ನು ತಿರಸ್ಕರಿಸಿ ಜಾತ್ಯಾತೀತ ಎಂಬುದು ಪಾಶ್ಚಿಮಾತ್ಯ ಚಿಂತನೆ, ಇದು ಈ ನೆಲದ ಗುಣಕ್ಕೆ ಹೊಂದುವುದಿಲ್ಲ ಎಂದಿದ್ದರು. (ಆಧಾರ–15 ನವೆಂಬರ್ 1948ರ ಸಂವಿಧಾನ ರಚನಾ ಸಭೆಯ ಚರ್ಚೆಗಳು, ಪುಟ ಸಂಖ್ಯೆ 547, 548 ಸಂಪುಟ– 3)

## ಬಲಿಷ್ಠ ಭಾರತಕ್ಕೆ ಏಕರೂಪ ನಾಗರಿಕ ಸಂಹಿತೆ ಆಧಾರ.


"ಒಟ್ಟು ಭಾರತ ದೇಶಕ್ಕೆ ಏಕರೂಪ ನಾಗರಿಕ ಸಂಹಿತೆ ಆಧಾರಯುಕ್ತವಾದದ್ದು, ಅಧಿಕಾರಕ್ಕೆ ಬರುವ ಸರ್ಕಾರಗಳು ಈ ನಿಯಮವನ್ನು ಗಂಭೀರವಾಗಿ ಪರಿಗಣಿಸಿ ಅನುಷ್ಠಾನಕ್ಕೆ ತರಬೇಕು ಭಾರತವನ್ನು ಒಟ್ಟುಗೂಡಿಸುವಲ್ಲಿ ಈ ನಿಯಮದ ಪಾತ್ರ ಅವಿಸ್ಮರಣೀಯವಾದದ್ದು, ಈ ನಿಯಮಗಳಲ್ಲಿ ಯಾವುದೇ ಧರ್ಮದ ಹಂಗಿಲ್ಲದೆ ಹಿಂದೂ ಕಾನೂನುಗಳನ್ನು ಸೇರಿಸಿದ್ದೇನೆ. ಅವು ಹಿಂದೂ ಕಾನೂನುಗಳು ಅನ್ನುವುದಕ್ಕಿಂತ ಶ್ರೇಷ್ಠವಾದವು ಎನ್ನುವ ಕಾರಣಕ್ಕೆ ನಿಯಮದ ಭಾಗ ಮಾಡಿದ್ದೇನೆ" ಎಂದು ಸಾರಿದ್ದರು. (ಆಧಾರ ಸಂವಿಧಾನ ರಚನಾ ಸಭೆಯ ಚರ್ಚೆಗಳು ಪುಟ ಸಂಖ್ಯೆ 730 733 739 741 742 ಸಂಪುಟ – 3)

ಹೀಗೆ ಅಂಬೇಡ್ಕರರ ವಾಸ್ತವದ ವ್ಯಾಖ್ಯಾನಗಳನ್ನು ಮುಖ ತಿರುಗಿಸಿ ನಿಲ್ಲಿಸುವ ಕೆಲಸಕ್ಕೆ, ಸಂಶೋಧನೆ ಎಂಬ ಅಸ್ತ್ರದ ಮೂಲಕ ತಡೆ ಹೇರಬೇಕಿದೆ, ಆ ಮುಖಾಂತರ ನೈಜ ಅಂಬೇಡ್ಕರರನ್ನು ಅವರ ತತ್ತ್ವಗಳನ್ನು ಸಮಾಜಕ್ಕೆ ತಲುಪಿಸುವ ಕಾರ್ಯದೊಟ್ಟಿಗೆ ಅಂಬೇಡ್ಕರರಿಗೆ ಸಂಶೋಧನಾ ಗೌರವ ತಲುಪಿಸುವುದು ಪ್ರಾಜ್ಞರ ಗುರುತ್ತರ ಜವಾಬ್ದಾರಿ. ಮುಸ್ಲಿಮರು ಕ್ರಿಶ್ಚಿಯನ್ ನಿಂದ ಬಂದಂತಹ ಬಹುದೊಡ್ಡ ಆಮಿಷಗಳನ್ನು ತಿರಸ್ಕರಿಸಿ ನಾನು ರಾಷ್ಟ್ರಾಂತರ ಮಾಡುವ ಪ್ರಶ್ನೆಯೇ ಇಲ್ಲ. ನಾನು ಮೊದಲು ಭಾರತೀಯ ಕಡೆಗೂ ಭಾರತೀಯ ಎಂಬ ಹೆಮ್ಮೆಯ ಭಾವ ಪಸರಿಸಿದ್ದ ಅಂಬೇಡ್ಕರರನ್ನು ಯುವ ಸಮುದಾಯ ಅನುಸರಿಸುವಂತೆ, ಆ ಮೂಲಕ ರಾಷ್ಟ್ರನಿರ್ಮಾಣದ ಕಾರ್ಯದಲ್ಲಿ ಸ್ವ–ತೊಡಗಿಕೊಳ್ಳುವಂತೆ, ಪ್ರೇರೇಪಿಸುವುದು ಅಂಬೇಡ್ಕರರಿಗೆ ಸಲ್ಲಿಸುವ ಗೌರವದ ಮಾದರಿ.

**– ಡಾ|| ಸುಧಾಕರ ಹೊಸಳ್ಳಿ**

## ಸಂಸ್ಮರಣೆ

# ಡಾ. ಶಿವಕುಮಾರ ಸ್ವಾಮೀಜಿ



ಪೂಜ್ಯ ಡಾ. ಶಿವಕುಮಾರ ಸ್ವಾಮೀಜಿ ಅವರು ಭಾರತೀಯ ಆಧ್ಯಾತ್ಮಿಕ ಪರಂಪರೆಯ ಪ್ರಮುಖ ಸಂತರು. ಸಿದ್ದಗಂಗಾ ಮಠದ ಮಠಾಧಿಪತಿಗಳಾಗಿದ್ದವರು. ಸ್ವಾಮೀಜಿಗಳು ಬಡ ಕುಟುಂಬದ ಮಕ್ಕಳ ಬಾಳಿಗೆ ದಾರಿದೀಪವಾಗಿದ್ದರು. ತ್ರಿವಿಧ ದಾಸೋಹಿ ಎಂದೇ ಭಕ್ತರ ಮನದಲ್ಲಿ ಉಳಿದುಕೊಂಡಿದ್ದಾರೆ.

**ಪರಿಚಯ:** ಶಿವಕುಮಾರ ಸ್ವಾಮೀಜಿ ಏಪ್ರಿಲ್ 1, 1908 ರಂದು ರಾಮನಗರ ಜಿಲ್ಲೆ ಮಾಗಡಿ ತಾಲೂಕಿನ ಸೋಲೂರು ಹೋಬಳಿ ವೀರಾಪುರ ಎಂಬ ಸಣ್ಣ ಗ್ರಾಮದಲ್ಲಿ ಜನಿಸಿದರು. ಇವರ ತಂದೆ ಹೊನ್ನಪ್ಪ ಮತ್ತು ತಾಯಿ ಗಂಗಮ್ಮ. ಇವರು ಪ್ರಾಥಮಿಕ ಶಿಕ್ಷಣವನ್ನು ವೀರಾಪುರ ಎಂಬಲ್ಲಿ ಮುಗಿಸಿದರು. ನಂತರ ಅವರು ಪ್ರೌಢಶಿಕ್ಷಣವನ್ನು ತುಮಕೂರಿನ ಸರ್ಕಾರಿ ಶಾಲೆಯಲ್ಲಿ ಮುಗಿಸಿದರು. ಬೆಂಗಳೂರು ವಿಶ್ವವಿದ್ಯಾಲಯದಿಂದ ಪದವಿ ಶಿಕ್ಷಣ ಪಡೆದರು. ಶ್ರೀಗಳು ಆಂಗ್ಲಭಾಷೆ ಮತ್ತು ಸಂಸ್ಕೃತ ಭಾಷೆಯಲ್ಲಿ ಅಪಾರ ಪಾಂಡಿತ್ಯ ಹೊಂದಿದ್ದರು.

ತಮ್ಮ ವಿದ್ಯಾಭ್ಯಾಸದ ಸಮಯದಲ್ಲಿ ಶಿವಕುಮಾರ ಸ್ವಾಮೀಜಿಗಳು ಸಿದ್ದಗಂಗಾ ಮಠದ ಒಡನಾಟದಲ್ಲಿದ್ದರು. ಹಿರಿಯ ಗುರುಗಳಾದ ಶ್ರೀ ಉದ್ಧಾನ ಸ್ವಾಮೀಜಿ ಹಾಗೂ ಆಗ ಕಿರಿಯ ಶ್ರೀಗಳಾಗಿದ್ದ ಮರುಳಾರಾಧ್ಯರ ಸಂಗ ಶಿವಣ್ಣನವರೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದರು. 1930ರಲ್ಲಿ ಉದ್ಧಾನ ಶಿವಯೋಗಿಗಳ ಕಿರಿಯ ಶ್ರೀಗಳಾಗಿದ್ದ ಮರುಳಾರಾಧ್ಯರು ಆಕಸ್ಮಿಕವಾಗಿ ಶಿವೈಕ್ಯರಾದರು. ಆಗ ಅವರ ಕ್ರಿಯಾ ಸಮಾಧಿ ಕಾರ್ಯಕ್ಕೆ ಆಗಮಿಸಿದ್ದ ಶಿವಣ್ಣನರನ್ನು ಉದ್ಧಾನ ಸ್ವಾಮೀಜಿಗಳು ಎಲ್ಲರ ಸಮ್ಮುಖದಲ್ಲಿ ಮಠದ ಉತ್ತರಾಧಿಕಾರಿ ಎಂದು ಘೋಷಿಸಿದರು. ನಂತರ ಸನ್ಯಾಸತ್ವ ಸ್ವೀಕಾರದ ಸ್ವಾಮೀಜಿ ವಿದ್ಯಾಭ್ಯಾಸ ಮುಗಿಸಿ ಸಿದ್ದಗಂಗಾ ಮಠಕ್ಕೆ ವಾಪಸ್ ಆದರು. ಅಂದಿನಿಂದ ತಮ್ಮ ಪೂರ್ಣ ಸಮಯವನ್ನು ಮಠದ ಏಳಿಗೆಗಾಗಿ ಶ್ರಮವಹಿಸಿದ್ದರು. ಉದ್ಧಾನ ಶಿವಯೋಗಿಗಳು ಶಿವೈಕ್ಯರಾದಾಗ ಮಠದ ಸಕಲ ಆಡಳಿತ, ಮಠದ ವಿದ್ಯಾರ್ಥಿಗಳ, ಶಿಕ್ಷಣ ಸಂಸ್ಥೆಗಳ ಯೋಗಕ್ಷೇಮದ ಜವಾಬ್ದಾರಿಯೂ ಶಿವಕುಮಾರ ಸ್ವಾಮೀಜಿ ವಹಿಸಿದ್ದರು.

**ಸಾಮಾಜಿಕ ಕಾರ್ಯಗಳು:** ಶಿವಕುಮಾರ ಸ್ವಾಮೀಜಿ ಅವರು ಶಿಕ್ಷಣ ಮತ್ತು ತರಬೇತಿಗಾಗಿ ಒಟ್ಟು 132 ಸಂಸ್ಥೆಗಳನ್ನು ಸ್ಥಾಪಿಸಿದರು. ಅವರು ಸಂಸ್ಕೃತದ ಸಾಂಪ್ರದಾಯಿಕ ಕಲಿಕೆಯಲ್ಲಿ ಆಧುನಿಕ ಶಿಕ್ಷಣ ಮತ್ತು ತಂತ್ರಜ್ಞಾನದಲ್ಲಿ ಶಿಕ್ಷಣ ನೀಡುವ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಿದರು ಶ್ರೀ ಸಿದ್ಧಗಂಗಾ ಮಠವು ಒಂದು ವಿಶಿಷ್ಟ ಗುರುಕುಲವಾಗಿದ್ದು, 10,000 ಕ್ಕೂ ಹೆಚ್ಚು ಬಡ ಮಕ್ಕಳಿಗೆ ಯಾವುದೇ ಜಾತಿ, ಧರ್ಮದ ತಾರತಮ್ಯವಿಲ್ಲದೆ ಉಚಿತ ಆಹಾರ ಮತ್ತು ಆಶ್ರಯದೊಂದಿಗೆ ಶಿಕ್ಷಣವನ್ನು ನೀಡುತ್ತಿದೆ. ಮಠವು ವಿವಿಧ ಸ್ಥಳಗಳಲ್ಲಿ ಅಂಧರ ಶಾಲೆಗಳನ್ನು ಸಹ ನಡೆಸುತ್ತಿದೆ. ಜೊತೆಗೆ 100 ಕ್ಕೂ ಹೆಚ್ಚು ಅಂಧ ಮಕ್ಕಳಿಗೆ ಉಚಿತ ಶಿಕ್ಷಣ ಮತ್ತು ಹಾಸ್ಟೆಲ್ ಸೌಲಭ್ಯಗಳೊಂದಿಗೆ ಆಹಾರವನ್ನು ನೀಡಲಾಗುತ್ತದೆ.

**ಪ್ರಶಸ್ತಿ:** 1965ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯವು ಶ್ರೀಗಳಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ. ಶ್ರೀಗಳ ಸಮಾಜ ಸೇವೆಯನ್ನು ಪರಿಗಣಿಸಿ ರಾಜ್ಯ ಸರ್ಕಾರ ಕರ್ನಾಟಕ ರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. 2015ರಲ್ಲಿ ಭಾರತ ಸರ್ಕಾರದ ಮೂರನೇ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ಪದ್ಮಭೂಷಣ ಪ್ರಶಸ್ತಿ ಲಭಿಸಿದೆ.

ಶಿವಕುಮಾರ ಸ್ವಾಮೀಜಿಗಳು ಜನವರಿ 21, 2019ರಂದು ತಮ್ಮ 111 ವಯಸ್ಸಿನಲ್ಲಿ ನಿಧನರಾದರು.

## ಭ್ರಷ್ಟಾಚಾರ ಮಾಡಬೇಡಿ

ಭ್ರಷ್ಟಾಚಾರ ಯಾವುದೇ ನಾಡಿನ ಗಂಭೀರ ಸಮಸ್ಯೆ. ಲಂಚ ತೆಗೆದುಕೊಳ್ಳುವುದು ಮತ್ತು ಕೊಡುವುದು ಎರಡೂ ಅಪರಾಧವೇ ಆಗುತ್ತದೆ. ಹಾಗಾಗಿ ಮನೆಯಿಂದ ಹಿಡಿದು ರಾಷ್ಟ್ರದ ಪ್ರಥಮ ಪ್ರಜೆಯವರೆಗೂ ಭ್ರಷ್ಟಾಚಾರಮುಕ್ತ ವ್ಯವಸ್ಥೆಯನ್ನು ತರುವುದಕ್ಕೆ ಶ್ರಮಿಸಬೇಕು. ನಮ್ಮ ನಮ್ಮ ಮನೆಯಲ್ಲಿ, ನಾವು ಮತ್ತು ಮನೆಯ ಮಕ್ಕಳಿಗೆ ಭ್ರಷ್ಟಾಚಾರದಿಂದ ರಾಷ್ಟ್ರಕ್ಕೆ ಆಗುತ್ತಿರುವ ನಷ್ಟದ ಬಗ್ಗೆ ನಾವು ತಿಳಿಸಿಕೊಡಬೇಕು. ಭ್ರಷ್ಟಾಚಾರರಹಿತ ಶಿಸ್ತಿನ ಬದುಕನ್ನು ನಾವು ರೂಪಿಸಿಕೊಳ್ಳಬೇಕು. ಆರ್ಥಿಕ ಭ್ರಷ್ಟತೆ, ವಚನ ಭ್ರಷ್ಟತೆ, ನೈತಿಕ ಭ್ರಷ್ಟತೆ, ನಡವಳಿಕೆಯ ಭ್ರಷ್ಟತೆ ಇತ್ಯಾದಿಗಳಿಂದ ಹೊರಬರಬೇಕು.




## ಭಗಿನಿ ನಿವೇದಿತಾ ಪ್ರತಿಷ್ಠಾನದ ಮಮತೆಯ ಮನೆ 'ಸ್ವಾಧಾರ'

ಸ್ವರ್ಗೀಯ ಡಾ.ಕುಸುಮಾತಾಯಿಯವರು ಮಹಾರಾಷ್ಟ್ರದ ಸಾಂಗ್ಲಿಯಲ್ಲಿ ಭಗಿನಿ ನಿವೇದಿತ ಪ್ರತಿಷ್ಠಾನದ ಮೂಲಕ ಸಂಘರ್ಷಮಯ ಜೀವನವನ್ನು ಸಾಗಿಸುತ್ತಿದ್ದ ಅನೇಕರಿಗೆ ಆತ್ಮವಿಶ್ವಾಸ ತುಂಬಿ ಅವರನ್ನು ಪ್ರೇರಣಾದಾಯಿ ವ್ಯಕ್ತಿಗಳನ್ನಾಗಿ ಮಾಡಿದರು. ಸಮಾಜದಲ್ಲಿ ತಮ್ಮ ಕತ್ತಲು ಕವಿದ ಬಾಲ್ಯದಲ್ಲಿ ದುರ್ಮಾರ್ಗದಲ್ಲಿ ನಡೆಯುತ್ತಿದ್ದ ಅಥವಾ ಯಾವುದೋ ಗಂಭೀರವಾದ ಶಾರೀರಿಕ ಅಥವಾ ಮಾನಸಿಕ ರೋಗಗಳಿಂದ ಪೀಡಿತರಾಗಿದ್ದ ಅನೇಕ ಹುಡುಗಿಯರ ಕೈ ಹಿಡಿದು ಪೋಷಿಸಿ, ಭಗಿನಿ ನಿವೇದಿತಾ ಪ್ರತಿಷ್ಠಾನವು ಸಮಾಜದಲ್ಲಿ ತನ್ನ ಆಶ್ರಮದ ಮೂಲಕ ಒಳ್ಳೆಯ ನಡತೆ ಮತ್ತು ಸಂಸ್ಕಾರಗಳನ್ನು ನೀಡಿ ಒಂದು ಆದರ್ಶ ಸಮಾಜವನ್ನು ನಿರ್ಮಿಸಲು ಪ್ರೇರಣೆ ನೀಡಿದೆ.

1970ರ ಏಪ್ರಿಲ್‌ನಲ್ಲಿ ಡಾ.ಕುಸುಮಾತಾಯಿ ಫಾಣೇಕರ್ ಅವರಿಂದ ಭಗಿನಿ ನಿವೇದಿತಾ ಪ್ರತಿಷ್ಠಾನದ ಸ್ಥಾಪನೆಯಾಯಿತು. ವಿಭಿನ್ನ ಆಯಾಮಗಳನ್ನು ಒಳಗೊಂಡ ಈ ಪ್ರತಿಷ್ಠಾನದಲ್ಲಿ ಇದುವರೆಗೆ 14,000ಕ್ಕೂ ಅಧಿಕ ಹೆಣ್ಣುಮಕ್ಕಳು ಮತ್ತು ಸ್ತ್ರೀಯರು ಸರಿಯಾದ ಮಾರ್ಗದರ್ಶನ, ಶಿಕ್ಷಣ ಮತ್ತು ಸಹಕಾರದೊಂದಿಗೆ ತಮ್ಮ ಬದುಕಿಗೆ ಯೋಗ್ಯವಾದ ಹೊಸ ರೂಪನ್ನು ಪಡೆದುಕೊಂಡಿದ್ದಾರೆ. ಒಬ್ಬ ಆಯುರ್ವೇದ ವೈದ್ಯೆ ಮತ್ತು ರಾಷ್ಟ್ರ ಸೇವಿಕಾ ಸಮಿತಿಯ ಕಾರ್ಯಕರ್ತೆಯಾಗಿ ಕುಸುಮಾ ತಾಯಿಯವರು ಸರ್ಕಾರಿ ಆಸ್ಪತ್ರೆಗಳಲ್ಲಿ ಮಹಿಳೆಯರ ಮತ್ತು ಮಕ್ಕಳ ಗಂಭೀರ ಪರಿಸ್ಥಿತಿಗಳನ್ನು ಬಹಳ ಹತ್ತಿರದಿಂದ ನೋಡಿದ್ದರು. ಮಹಿಳೆಯರನ್ನು ಸಂಪೂರ್ಣ ಸ್ವಸ್ಥರನ್ನಾಗಿ ಮಾಡಲು ಕೇವಲ ಶಾರೀರಿಕ ರೂಪದಿಂದ ಮಾತ್ರವಲ್ಲ, ಅವರೆಲ್ಲರ ಮಾನಸಿಕ ಸ್ತರಗಳನ್ನೂ ಸುದೃಢ ಮತ್ತು ಸಕ್ಷಮ ಮಾಡಬೇಕೆಂದು ಅವರು ಅರಿತಿದ್ದರು. ಸಮಾಜದ ಒಳಗೊಳಗೇ ಅವಿತಿರುವ ಕ್ಷುದ್ರ ಮನಸ್ಸುಗಳು, ಅಶಿಕ್ಷಣ, ಅಜ್ಞಾನ, ಅಪೌಷ್ಟಿಕ ಆಹಾರ ಹೀಗೆ ಅನೇಕ ಮಜಲುಗಳಲ್ಲಿ ಸರಿಯಾದದ್ದನ್ನು ಹುಡುಕಬೇಕಾದ ಅಗತ್ಯವಿತ್ತು. ನಿವೇದಿತಾ ಪ್ರತಿಷ್ಠಾನವು ಮೊಟ್ಟಮೊದಲಿಗೆ ಚಿಕ್ಕ ವಯಸ್ಸಿನಲ್ಲಿ ಅತ್ಯಾಚಾರಕ್ಕೆ ಒಳಗಾಗಿ ತನ್ನ ದೇಹವನ್ನು ಅನಿವಾರ್ಯವಾಗಿ ಮಾರಿಕೊಳ್ಳುವ ಸ್ಥಿತಿಯಲ್ಲಿ ಸಿಕ್ಕಿಹಾಕಿಕೊಂಡಿದ್ದ ಹುಡುಗಿಯರು ಮತ್ತು ಮಹಿಳೆಯರಿಗೆ ಆಶ್ರಯ ನೀಡಿ ಊಟ ಇತ್ಯಾದಿಗಳ ವ್ಯವಸ್ಥೆ ಮಾಡಲು "ಮಾಹೆರ್" (ಅಮ್ಮನ ಮನೆ) ಯೋಜನೆಯನ್ನು ಆರಂಭಿಸಿತು. ಈ ಯೋಜನೆ ವರ್ತಮಾನದಲ್ಲಿ "ಸ್ವಾಧಾರ" ಎಂಬ ಹೆಸರಿನಿಂದ ಪ್ರಸಿದ್ಧಿಯಾಗಿದೆ.

ಯಾವುದೇ ಪ್ರಕಾರದಲ್ಲಿ ಪೀಡಿತರಾಗಿರುವ ಮಹಿಳೆಯರು ಆರು ತಿಂಗಳಿಂದ ಎರಡು ವರ್ಷಗಳವರೆಗೆ ಇಲ್ಲಿ ಉಚಿತವಾಗಿ ಇರಬಹುದು. ಅವರಿಗೆ ಆ ಸಂದರ್ಭದಲ್ಲಿ ಶಾರೀರಿಕ ಹಾಗೂ ಮಾನಸಿಕ ಬೆಂಬಲ, ಕಾನೂನಿನ ಸಲಹೆ, ವೈದ್ಯಕೀಯ ಸೌಲಭ್ಯಗಳು ಸಿಗುತ್ತವೆ. ಜೊತೆಗೆ ಕೌಶಲ್ಯ ಅಭಿವೃದ್ಧಿಯ ಮೂಲಕ ಆತ್ಮನಿರ್ಭರರಾಗಲು ಸಕಲ ಸಿದ್ಧತೆಗಳನ್ನು ಮಾಡಿಕೊಡಲಾಗುತ್ತದೆ. ಸರ್ಕಾರಿ ಯೋಜನೆಗಳ ಜೊತೆಜೊತೆಗೆ ಎಲ್ಲರನ್ನೂ ಒಟ್ಟಾಗಿ ಸೇರಿಸಿ ಮಹಿಳೆಯರಲ್ಲಿ ಜನಜಾಗೃತಿ ಶಿಬಿರ, ವಿವಿಧ ಯೋಜನೆಗಳ ಮೂಲಕ ತರಬೇತಿ, ಕ್ಯಾಂಟೀನ್ ನಡೆಸುವುದು, ಸ್ಟೇಷನರಿ ಅಂಗಡಿ, ಆಫೀಸಿನ ಫೈಲ್'ಗಳನ್ನು ತಯಾರಿಸುವುದು, ಮೊದಲಾದ ಅನೇಕ ರೀತಿಯ ಉದ್ಯೋಗಗಳ ಮೂಲಕ ಪ್ರೋತ್ಸಾಹ ನೀಡಿ ಮಹಿಳೆಯರನ್ನು ಆತ್ಮನಿರ್ಭರರನ್ನಾಗಿ ಮಾಡಲಾಗುತ್ತದೆ. ಸ್ವಾಧಾರ ಗೃಹದಿಂದ ನಿಯಮಿತವಾಗಿ ಬ್ಯೂಟಿ ಪಾರ್ಲರ್, ಪೇಪರ್ ಬ್ಯಾಗ್'ಗಳನ್ನು ಮಾಡುವ ತರಬೇತಿಯನ್ನು ನೀಡಲಾಗುತ್ತದೆ. ಈ ಮೂಲಕ ಅನೇಕ ಹುಡುಗಿಯರು ಪಾರ್ಲರ್ ಮತ್ತು ನರ್ಸಿಂಗ್ ತರಬೇತಿಗಳನ್ನು ಪೂರೈಸಿ ಆಯಾಯ ಕ್ಷೇತ್ರಗಳಲ್ಲಿ ಕಾರ್ಯನಿರತರಾಗಿದ್ದಾರೆ.

ಸಮಾಜದಲ್ಲಿ ಕಂಡುಬರುವ ದೇವದಾಸಿಯರ ಸಾಮಾಜಿಕ ಪಿಡುಗುಗಳು ಮಹಾರಾಷ್ಟ್ರ ಮತ್ತು ಕರ್ನಾಟಕದ ಕೆಲವು ಭಾಗಗಳಲ್ಲಿವೆ. ಕುಸುಮಾತಾಯಿಯವರು ಆಂದೋಲನ ನಡೆಸಿ ಇವರುಗಳಿಗೆ ಪ್ರೀತಿಯ ತಾಯಿಯಾದರು. ಈ ಅಂಧಕಾರಗಳನ್ನು ದೂರ ಮಾಡುವ ಸಲುವಾಗಿ ಪ್ರತಿಷ್ಠಾನವು ಒಂದು ಸುರಕ್ಷಿತ ನಿವಾಸವನ್ನು ಸ್ಥಾಪಿಸಿತು. ಅಲ್ಲಿ 6 ವರ್ಷದ ಹೆಣ್ಣು ಮಕ್ಕಳು ಪೂರ್ತಿ ಶಿಕ್ಷಣ ಪಡೆದು, ಯೌವನಾವಸ್ಥೆಗೆ ಬರುವ ತನಕ ನಿಶ್ಚಿಂತೆಯಿಂದ ಬೆಳೆದು, ಸಮಾಜದಲ್ಲಿ ಸ್ವಾಭಿಮಾನದಿಂದ ಜೀವಿಸಲು ಪ್ರೇರಣೆ ನೀಡಿತು. ಅವರ ಈ ಮಹತ್ವದ ನಿರ್ಧಾರದಿಂದ ದೇವದಾಸಿಯರ ಜೀವನದಲ್ಲಿ ಅಷ್ಟೇ ಅಲ್ಲ, ಸಮಾಜದ ಆಲೋಚನೆಯಲ್ಲೂ ಪರಿವರ್ತನೆ ತರುವ ಒಂದು ಮಹತ್ವಪೂರ್ಣ ಬದಲಾವಣೆಯಾಯಿತು.


ನಿವೇದಿತಾ ಪ್ರತಿಷ್ಠಾನದಿಂದ ಹೆಚ್‌ಐವಿ ಪಾಸಿಟಿವ್ ಇದ್ದ ಹುಡುಗಿಯರು ಮತ್ತು ಮಹಿಳೆಯರಿಗೆ ವಸತಿ ಮತ್ತು ಊಟೋಪಚಾರದ ಕೇಂದ್ರವನ್ನು ನಡೆಸಲಾಯಿತು. ಅಲ್ಲಿ ಅವರ ಶಿಕ್ಷಣ ಆರೋಗ್ಯ ಮತ್ತು ಕೌಶಲ್ಯ ವಿಕಾಸದ ಸಂಪೂರ್ಣ ವ್ಯವಸ್ಥೆಯು ಸರಕಾರ ಮತ್ತು ಸಮಾಜದ ಸಹಯೋಗದಿಂದ ನಡೆಯುತ್ತಿದೆ. ವರ್ತಮಾನದಲ್ಲಿ ಸಾಂಗ್ಲಿಯ ಯಶವಂತ ನಗರದಲ್ಲಿ ಏಡ್ಸ್‌ನಿಂದ ಬಾಧಿತರಾದ ಹುಡುಗಿಯರ ನಿವಾಸಿ ಆಶ್ರಮವಿದೆ. ಸಾಂಗ್ಲಿಯಲ್ಲಿ ಸಂಸ್ಥೆಯ ಮೂಲಕ ಹಲವಾರು ಕ್ಷೇತ್ರಗಳಲ್ಲಿ ಕಾರ್ಯಗಳು ನಡೆಯುತ್ತಿವೆ. 2 ಅನಾಥಾಶ್ರಮ, 2 ಕೌಟುಂಬಿಕ ಸಲಹಾ ಕೇಂದ್ರಗಳು, ಪೀಡಿತ ಮಹಿಳೆಯರಿಗೆ ಅಲ್ಪ ಸೌಲಭ್ಯಗಳಿರುವ ನಿರ್ಮಿತಿ ಕೇಂದ್ರ, ಸ್ವಾಧಾರ, ಅನ್ನಪೂರ್ಣ ಟೆಕ್ನಾಲಜಿ ಟ್ರೈನಿಂಗ್ ಸೆಂಟರ್ ಮತ್ತು ಅಲ್ಪ ಶಿಕ್ಷಣ ಹೊಂದಿದ, ಅವಶ್ಯಕತೆ ಇರುವ ಹುಡುಗರು ಮತ್ತು ಹುಡುಗಿಯರಿಗೆ ಡಾ.ಕುಸುಮಾತಾಯಿ ಫಣೇಕರ್ ವ್ಯವಸಾಯ ತರಬೇತಿ ಕೇಂದ್ರ ನಡೆಯುತ್ತಿದೆ. ಈ ಕೇಂದ್ರಕ್ಕೆ ಒಕೇಶನಲ್ ವಾರ್ಡ್ ಎಂಬ ಮಾನ್ಯತೆಯೂ ದೊರೆತಿದೆ. ಇಲ್ಲಿ ಪ್ಯಾರಾಮೆಡಿಕಲ್ ಕೋರ್ಸ್‌ಗಳು ಮತ್ತು ಬ್ಯೂಟಿ ಪಾರ್ಲರ್ ಮತ್ತು ಫ್ಯಾಶನ್ ಡಿಸೈನಿಂಗ್ ಕೋರ್ಸ್‌ಗಳು ನಡೆಯುತ್ತಿವೆ. ಕಲಿಯುವ ಹುಡುಗಿಯರಿಗೆ ಇಲ್ಲಿ ವಸತಿಗೃಹದ ಸೌಲಭ್ಯವು ಇದೆ. ಕುಸುಮಾತಾಯಿಯವರ ದೂರದೃಷ್ಟಿಯಿಂದ ಆರಂಭವಾದ ಈ ಸಂಸ್ಥೆಯು 50 ವರ್ಷಗಳನ್ನು ಪೂರೈಸಿದೆ ಮತ್ತು ಮಹಿಳೆಯರಿಗೆ ಕಾಲಕ್ಕೆ ತಕ್ಕ ಹಾಗೆ ಯೋಜನೆಗಳು ನಡೆಯುತ್ತಿವೆ.

## ಹಿಂದುತ್ವ: ವರ್ತಮಾನದ ಸಂದರ್ಭದಲ್ಲಿ ಹಿಂದುತ್ವದ ಪ್ರಸ್ತುತತೆ

ಪುಸ್ತಕ ಪರಿಚಯ

**ಪ್ರಕಾಶನ:** ಸಾಹಿತ್ಯ ಸಂಗಮ
**ಬೆಲೆ:** ರೂ.50/-

ಹಿಂದುತ್ವವು ಒಂದು ಜೀವನ ಪದ್ಧತಿಯ ರೂಪದಲ್ಲಿ ವಿಶ್ವದ ಪ್ರಾಚೀನ ಧರ್ಮ, ಸಂಸ್ಕೃತಿ ಮತ್ತು ನಾಗರಿಕತೆಯಾಗಿದೆ. ಇದು ಚಿರಪುರಾತನವಾಗಿರುವ ಜೊತೆಜೊತೆಗೇ ನಿತ್ಯ ನೂತನವೂ ಆಗಿದೆ. ಈ ಕಾರಣದಿಂದಾಗಿಯೇ ಅದನ್ನು ಕಾಲಾತೀತವಾಗಿರುವ 'ಸನಾತನ' ಎಂದೂ ಕರೆಯಲಾಗುತ್ತದೆ. ಹಿಂದುತ್ವದ ವಿಶೇಷತೆಯೆಂದರೆ, ತನ್ನ ಮೂಲಭೂತ ಶಾಶ್ವತ ಸಿದ್ಧಾಂತಗಳನ್ನು ಪರಿಶುದ್ಧ ಸ್ವರೂಪದಲ್ಲಿಯೇ ಕಾಪಾಡಿಕೊಳ್ಳುವುದರ ಜೊತೆಜೊತೆಗೇ, ಕಾಲದ ಅಗತ್ಯಕ್ಕೆ ತಕ್ಕಂತೆ ತನ್ನ ಅಭಿವ್ಯಕ್ತಿ, ಶಬ್ದಭಂಡಾರ ಮತ್ತು ನಡವಳಿಕೆಗಳನ್ನು ಅದು ಬದಲಾಯಿಸಿಕೊಳ್ಳುತ್ತದೆ.




ಅನೇಕ ಘೋರ ದಾಳಿಗಳ ನಂತರವೂ ಅದು ಜೀವಂತವಾಗಿ ಉಳಿದಿರುವ, ಪ್ರಗತಿಯನ್ನು ಸಾಧಿಸುತ್ತಿರುವ ಹಾಗೂ ವಿಜಯಸನ್ನದ್ಧವಾಗಿರುವ ಹಿಂದಿನ ರಹಸ್ಯವೇ ಇದು. ಆದರೆ ಅನೇಕ ವಿಘಟನಕಾರಿ ಶಕ್ತಿಗಳು ಇದನ್ನು ಕಳಂಕಿತಗೊಳಿಸಲು ಅಪಪ್ರಚಾರದಲ್ಲೂ ತೊಡಗಿದ್ದಾರೆ. ಸುಳ್ಳಿಗೆ ಸರಿಯಾದ ಉತ್ತರವನ್ನು ಸತ್ಯದ ಮೂಲಕ ಮಾತ್ರವೇ ನೀಡಲು ಸಾಧ್ಯ. ಈ ಸಮಕಾಲೀನ ಅವಶ್ಯಕತೆಯನ್ನು ಪೂರೈಸಲು ಈ ಪುಸ್ತಕವನ್ನು ಪ್ರಕಟಿಸಲಾಗಿದೆ. ಆರೆಸ್ಸೆಸ್ ಸರಸಂಘಚಾಲಕರಾದ ಡಾ॥ ಮೋಹನ್ ಭಾಗವತ್, ಹಿರಿಯ ಚಿಂತಕ ಹಾಗೂ ಅಖಿಲ ಭಾರತೀಯ ಕಾರ್ಯಕಾರಿಣಿಯ ಸದಸ್ಯರಾದ ಶ್ರೀ ಸುರೇಶ್ ಸೋನಿ ಮತ್ತು ಸಂಘದ ಸಹಸರಕಾರ್ಯವಾಹರಾದ ಶ್ರೀ ಅರುಣ್ ಕುಮಾರ್ ಅವರು 'ಹಿಂದುತ್ವ' ವಿಷಯದ ಕುರಿತು ನೀಡಿರುವ ಉಪನ್ಯಾಸಗಳನ್ನು ಅಕ್ಷರರೂಪಕ್ಕೆ ಇಳಿಸಿ, ಸಂಪಾದಿಸಿ ಈ ಪುಸ್ತಕದಲ್ಲಿ ಪ್ರಕಟಿಸಲಾಗಿದೆ.

**ಪುಸ್ತಕಕ್ಕಾಗಿ ಸಂಪರ್ಕಿಸಿ: 6360581957**

**ಸಂಪಾದಕೀಯ ಸಹಕಾರ:** ಡಾ॥ ಸುಧಾಕರ ಹೊಸಳ್ಳಿ, ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯಕೃಷ್ಣ, ರೂಪಶ್ರೀ ನಾಗರಾಜ್

## ಸಾಲುದ್ದದ ಸುದ್ದಿಗಳು

### ಏರ್ ಇಂಡಿಯಾ ವಿಮಾನದಲ್ಲಿ ಕರ್ನಾಟಕದ ಚಿತ್ತಾರ ಕಲೆ




ಏರ್ ಇಂಡಿಯಾ ಎಕ್ಸ್‌ಪ್ರೆಸ್ 100ನೇ ವಿಮಾನವನ್ನು ತನ್ನ ಫ್ಲೀಟ್‌ಗೆ ಸೇರಿಸುವ ಮೂಲಕ ಪ್ರಮುಖ ಮೈಲಿಗಲ್ಲು ಸ್ಥಾಪಿಸಿದೆ. ಕರ್ನಾಟಕದ ಸಾಂಪ್ರದಾಯಿಕ ವರ್ಣಚಿತ್ರದಿಂದ ಪ್ರೇರಿತವಾದ ಅದ್ಭುತ 'ಚಿತ್ತಾರ' ಬಾಲ ಕಲೆಯನ್ನು ಹೊಂದಿರುವ ಹೊಸ ಬೋಯಿಂಗ್ 737-8 ಅನ್ನು ಬೆಂಗಳೂರಿನ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಆರಂಭಿಸಲಾಗಿದೆ. ಏರ್ ಇಂಡಿಯಾ ವಿಮಾನಯಾನ ಸಂಸ್ಥೆಯು ಈಗ ಪ್ರತಿ ವಾರ ಬೆಂಗಳೂರು ವಿಮಾನ ನಿಲ್ದಾಣದಿಂದ 445 ಕ್ಕೂ ಹೆಚ್ಚು ವಿಮಾನಗಳನ್ನು ನಿರ್ವಹಿಸುತ್ತದೆ.

### ಶ್ರೀಲಂಕಾದ ಆಸ್ಪತ್ರೆಗಳಲ್ಲಿ ಔಷಧಿಗಳ ಕೊರತೆ: ಭಾರತದ ನೆರವು



ಶ್ರೀಲಂಕಾದ ಆಸ್ಪತ್ರೆಗಳಲ್ಲಿ ಅಗತ್ಯ ಔಷಧಿಗಳ ಕೊರತೆ ಉದ್ಭವವಾಗಿರುವ ಹಿನ್ನೆಲೆಯಲ್ಲಿ ಭಾರತವು ಸಹಾಯ ಮಾಡಲು ಮುಂದಾಗಿದೆ. ಹೃದಯ ವೈಫಲ್ಯ ಅಥವಾ ಎಡಿಮಾದಂತಹ ಪರಿಸ್ಥಿತಿಗಳಲ್ಲಿ ದೇಹದಿಂದ ಹೆಚ್ಚುವರಿ ದ್ರವವನ್ನು ತೆಗೆದುಹಾಕಲು ಬಳಸುವ ಮೂತ್ರವರ್ಧಕ ಔಷಧವಾದ ಫ್ಯೂರೋಸೆಮೈಡ್ ಇಂಜೆಕ್ಷನ್ 20mg/2mlನ 50,000 ಆಂಪೂಲ್‌ಗಳನ್ನು (ವೈದ್ಯಕೀಯ ಕಂಟೇನರ್) ಭಾರತ ಸರ್ಕಾರ ಕಳುಹಿಸಿಕೊಟ್ಟಿದೆ. ಶ್ರೀಲಂಕಾದ ಭಾರತೀಯ ಹೈಕಮಿಷನರ್ ಸಂತೋಷ್ ಝಾ ಅವರು ದೇಶದ ಆರೋಗ್ಯ ಮತ್ತು ಸಮೂಹ ಮಾಧ್ಯಮ ಸಚಿವ ಡಾ. ನಲಿಂದಾ ಜಯತಿಸ್ಸಾ ಅವರಿಗೆ ಈ ರವಾನೆಯನ್ನು ಹಸ್ತಾಂತರಿಸಿದರು.

### ಅರುಣಾಚಲ ರಾಜ್ಯದ ಮೊದಲ ಕರ್ನಾಟಕ ಸಂಗೀತ ವಿದ್ವಾಂಸೆಯಾದ ಡೆಲ್ಲಾಂಗ್



ಇದೇ ಮೊದಲ ಬಾರಿಗೆ ಅರುಣಾಚಲ ಪ್ರದೇಶದ ಯುವತಿಯೊಬ್ಬಳು ಕರ್ನಾಟಕ ಶಾಸ್ತ್ರೀಯ ಸಂಗೀತ ವಿದ್ವಾಂಸೆಯಾಗಿ ಹೊರಹೊಮ್ಮಿದ್ದಾಳೆ. ಚೆನ್ನೈನ ಪ್ರತಿಷ್ಠಿತ ಕಲಾಕ್ಷೇತ್ರ ಫೌಂಡೇಶನ್‌ನಲ್ಲಿ ನಡೆದ ಸಂಗೀತಗೋಷ್ಠಿಯ ನಂತರ, ವಾಕ್ರೋ ಸಿಸ್ಟರ್ಸ್‌ನ ಅಶಾಪ್‌ಮೈ ಡೆಲ್ಲಾಂಗ್ ಅವರು ಅರುಣಾಚಲ ಪ್ರದೇಶದ ಮೊದಲ ಕರ್ನಾಟಕ ಸಂಗೀತ ಪದವೀಧರೆಯಾಗಿ ಹೊರಹೊಮ್ಮಿದ್ದಾರೆ. ಈ ಐತಿಹಾಸಿಕ ಸಾಧನೆಯತ್ತ ಅವರ ಪ್ರಯಾಣದಲ್ಲಿ ಈ ಪ್ರದರ್ಶನವು ಮಹತ್ವದ ಹೆಜ್ಜೆಯಾಗಿದೆ. ಈ ವಿಶೇಷ ಸಂಗೀತ ಶಿಕ್ಷಣವನ್ನು ಪೂರ್ಣಗೊಳಿಸಿದ ಅರುಣಾಚಲ ಪ್ರದೇಶದ ಮೊದಲ ವ್ಯಕ್ತಿಯಾಗಿ, ಡೆಲ್ಲಾಂಗ್ ಅವರ ಸಾಧನೆಯು ಒಂದು ಪ್ರಮುಖ ಸಾಂಸ್ಕೃತಿಕ ಮೈಲಿಗಲ್ಲನ್ನು ಪ್ರತಿನಿಧಿಸುತ್ತದೆ.

### 22 ರಾಷ್ಟ್ರೀಯ ಭಾಷೆಗಳು ಮತ್ತು ಇಂಗ್ಲೀಷ್‌ಗೆ ಪಠ್ಯಪುಸ್ತಕಗಳು ಡಿಜಿಟಲೀಕರಣ

ಈ ವರ್ಷದ ಬಜೆಟ್‌ನಲ್ಲಿ ಭಾರತೀಯ ಭಾಷಾ ಪುಸ್ತಕ ಯೋಜನೆಯ ಅನುಷ್ಠಾನಕ್ಕೆ ಅವಕಾಶ ಕಲ್ಪಿಸಲಾಗಿದೆ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಹೇಳಿದ್ದಾರೆ. ಇದು ಎಲ್ಲಾ 22 ನಿಗದಿತ ಭಾಷೆಗಳಿಗೆ ಮತ್ತು ಇಂಗ್ಲಿಷ್‌ಗೆ ಡಿಜಿಟಲೀಕರಣ ಪಠ್ಯಪುಸ್ತಕಗಳನ್ನು ಒಳಗೊಂಡಿರುತ್ತದೆ. 2013-14ರಲ್ಲಿ ಉನ್ನತ ಶಿಕ್ಷಣಕ್ಕಾಗಿ ಕೇವಲ 26 750 ಕೋಟಿ ರೂಪಾಯಿಗಳಿದ್ದ ವೆಚ್ಚವು ಈಗ 50 ಸಾವಿರ ಕೋಟಿ ರೂಪಾಯಿಗಳಿಗೆ ಏರಿದೆ. ಇದು ಶಿಕ್ಷಣದ ಕಡೆಗೆ ಸರ್ಕಾರದ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ. ಶಿಕ್ಷಣದಲ್ಲಿ AI ಗಾಗಿ ಈ ಬಾರಿ 500 ಕೋಟಿ ರೂಪಾಯಿಗಳನ್ನು ಮೀಸಲಿಡಲಾಗಿದೆ. ಮುಂಬರುವ ಐದು ವರ್ಷಗಳಲ್ಲಿ ದೇಶದಲ್ಲಿ 50 ಸಾವಿರ ಅಟಲ್ ಟಿಂಕರಿಂಗ್ ಲ್ಯಾಬ್‌ಗಳನ್ನು ತೆರೆಯಲು ಸರ್ಕಾರ ನಿರ್ಧರಿಸಿದೆ

### 1.75 ಲಕ್ಷ ಕೋಟಿ ರೂ ದಾಟಿದ ಭಾರತದ ಸ್ಮಾರ್ಟ್‌ಫೋನ್ ರಫ್ತು

ಭಾರತದ ಸ್ಮಾರ್ಟ್‌ಫೋನ್ ರಫ್ತು 2024-25ನೇ ಹಣಕಾಸು ವರ್ಷದ (ಏಪ್ರಿಲ್-ಫೆಬ್ರವರಿ) 11 ತಿಂಗಳಲ್ಲಿ 1.75 ಲಕ್ಷ ಕೋಟಿ ರೂ. ($21 ಬಿಲಿಯನ್) ದಾಟಿದೆ, ಇದು 2023-24ನೇ ಹಣಕಾಸು ವರ್ಷದ ಅದೇ ಅವಧಿಗೆ ಹೋಲಿಸಿದರೆ ಶೇ. 54 ರಷ್ಟು ಹೆಚ್ಚಾಗಿದೆ ಎಂದು ಇತ್ತೀಚಿನ ಉದ್ಯಮ ದತ್ತಾಂಶಗಳು ತಿಳಿಸಿವೆ. ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಅವರು 2024-25ರ ಅವಧಿಯಲ್ಲಿ ಸ್ಮಾರ್ಟ್‌ಫೋನ್ ರಫ್ತು 20 ಬಿಲಿಯನ್ ಡಾಲರ್ (ರೂ.1.68 ಲಕ್ಷ ಕೋಟಿ) ತಲುಪುವ ನಿರೀಕ್ಷೆಯಿದೆ ಎಂದು ಹೇಳಿದ್ದಾರೆ, ಆದರೆ ಭಾರತ ಸೆಲ್ಯುಲಾರ್ ಮತ್ತು ಎಲೆಕ್ಟ್ರಾನಿಕ್ಸ್ ಅಸೋಸಿಯೇಷನ್ (ICEA) ದತ್ತಾಂಶದ ಪ್ರಕಾರ, ಪ್ರಸ್ತುತ ಹಣಕಾಸು ವರ್ಷದ 11 ತಿಂಗಳಲ್ಲಿ ಅಂದಾಜು ಈಗಾಗಲೇ ಮೀರಿದೆ.

### ವಿದೇಶಿ ಉಪಗ್ರಹ ಉಡಾವಣೆ ಮೂಲಕ $143 ಮಿಲಿಯನ್ ಗಳಿಸಿದೆ ಭಾರತ

2015 ರಿಂದ 2024 ರವರೆಗಿನ ಅವಧಿಯಲ್ಲಿ ವಿದೇಶಿ ಉಪಗ್ರಹಗಳನ್ನು ಉಡಾವಣೆ ಮಾಡುವ ಮೂಲಕ ಭಾರತವು 143 ಮಿಲಿಯನ್ ಅಮೆರಿಕನ್ ಡಾಲರ್ ಮೌಲ್ಯದ ವಿದೇಶಿ ವಿನಿಮಯ ಆದಾಯವನ್ನು ಗಳಿಸಿದೆ ಎಂದು ಬಾಹ್ಯಾಕಾಶ ಸಚಿವ (ಸ್ವತಂತ್ರ ಹೊಣೆಗಾರಿಕೆ) ಜಿತೇಂದ್ರ ಸಿಂಗ್ ಲೋಕಸಭೆಗೆ ಮಾಹಿತಿ ನೀಡಿದರು. ಜನವರಿ 2015 ರಿಂದ ಡಿಸೆಂಬರ್ 2024 ರವರೆಗಿನ ಕಳೆದ ಹತ್ತು ವರ್ಷಗಳಲ್ಲಿ, ಇಸ್ರೋದ ಪಿಎಸ್‌ಎಲ್‌ವಿ, ಎಲ್‌ವಿಎಂ 3 ಮತ್ತು ಎಸ್‌ಎಸ್‌ಎಲ್‌ವಿ ಉಡಾವಣಾ ವಾಹನಗಳ ಮೂಲಕ ಒಟ್ಟು 393 ವಿದೇಶಿ ಉಪಗ್ರಹಗಳು ಮತ್ತು ಮೂರು ಭಾರತೀಯ ಗ್ರಾಹಕ ಉಪಗ್ರಹಗಳನ್ನು ವಾಣಿಜ್ಯ ಆಧಾರದ ಮೇಲೆ ಉಡಾವಣೆ ಮಾಡಲಾಗಿದೆ ಎಂದು ಸಚಿವಾಲಯವು ಲೋಕಸಭೆಗೆ ಲಿಖಿತ ಉತ್ತರದಲ್ಲಿ ತಿಳಿಸಿದೆ. ಉಡಾವಣೆಯಾದ ಒಟ್ಟು 393 ವಿದೇಶಿ ಉಪಗ್ರಹಗಳಲ್ಲಿ 232 ಅಮೇರಿಕ, 83 ಯುಕೆ, ಸಿಂಗಾಪುರ 19, ಕೆನಡಾ 8, ಕೊರಿಯಾ 5 ಲಕ್ಸೆಂಬರ್ಗ್ 4, ಇಟಲಿ 4, ಜರ್ಮನಿಯ 3, ಬೆಲ್ಜಿಯಂನ 3, ಫಿನ್ಲ್ಯಾಂಡಿನ 3, ಫ್ರಾನ್ಸಿನ 3, ಸ್ವಿಟ್ಜರ್ಲೆಂಡಿನ 2, ನೆದರ್ಲ್ಯಾಂಡಿನ 2, ಜಪಾನಿನ 2, ಇಸ್ರೇಲಿನ 2, ಸ್ಪೇನಿನ 2, ಆಸ್ಟ್ರೇಲಿಯಾದ 1, ಯುನೈಟೆಡ್ ಅರಬ್ ಎಮಿರೇಟ್ಸ್‌ನ 1, ಮತ್ತು ಆಸ್ಟ್ರಿಯಾದ 1 ಉಪಗ್ರಹ ಉಡಾವಣೆ ಮಾಡಲಾಗಿದೆ.

## ಮಹಾಕುಂಭಮೇಳದಲ್ಲಿ ₹30 ಕೋಟಿ ಸಂಪಾದಿಸಿದ ನಾವಿಕನ ಕುಟುಂಬ

ಸರಿಯಾದ ಸಮಯ ಮತ್ತು ಆ ಸಮಯಕ್ಕೆ ತಕ್ಕಂತಹ ನಮ್ಮ ಉತ್ತಮ ಆಲೋಚನೆ ನಮ್ಮನ್ನು ಜೀವನದಲ್ಲಿ ಗೆಲ್ಲಿಸಬಲ್ಲದು ಎಂಬುದಕ್ಕೆ ಉತ್ತರಪ್ರದೇಶದ ನಾವಿಕ ಕುಟುಂಬವೊಂದು ಸಾಕ್ಷಿಯಾಗಿದೆ. 2025ರ ಜನವರಿ 13ರಿಂದ ಫೆಬ್ರವರಿ 26ರವರೆಗೆ ನಡೆದ ಮಹಾಕುಂಭ ಮೇಳದಲ್ಲಿ ಜನರನ್ನು ನದಿ ದಾಟಿಸುವ ಕಾಯಕದಲ್ಲಿ ತೊಡಗಿದ್ದ ಈ ಕುಟುಂಬ ಗಳಿಸಿದ್ದು ಬರೋಬ್ಬರಿ 30 ಕೋಟಿ ರೂಪಾಯಿ!

66 ಕೋಟಿ ಜನರ ಆಗಮನಕ್ಕೆ ಸಾಕ್ಷಿಯಾದ ಉತ್ತರಪ್ರದೇಶದ ಪ್ರಯಾಗ್‌ರಾಜ್‌ನ ಕುಂಭಮೇಳ ಸ್ಥಳೀಯರು ಹಾಗೂ ಇಡೀ ರಾಜ್ಯದ ಆರ್ಥಿಕತೆಗೆ ಭರ್ಜರಿ ಕೊಡುಗೆ ನೀಡಿದೆ. ಅದರಲ್ಲೂ ತ್ರಿವೇಣಿ ಸಂಗಮ ಸ್ಥಳಕ್ಕೆ ಜನರನ್ನು ಕರೆದೊಯ್ಯುವ ಸೇವೆ ನೀಡಿದ ನಾವಿಕ ಪಿಂಟು ಮಹರ ಅವರ ಕುಟುಂಬ ಕುಂಭಮೇಳದ ಅವಧಿಯಲ್ಲಿ ಭರ್ಜರಿ 30 ಕೋಟಿ ರೂ. ಸಂಪಾದಿಸಿದ ವಿಷಯವನ್ನು ಖುದ್ದು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಹಂಚಿಕೊಂಡಿದ್ದಾರೆ. ಭಕ್ತರು ನದಿದಂಡೆಗಳಿಂದ ಸಂಗಮಸ್ಥಳಕ್ಕೆ ತೆರಳಲು ದೋಣಿ ಅವಲಂಬಿಸಿದ್ದರು. ಇದಕ್ಕಾಗಿ ಒಬ್ಬರಿಗೆ 500ರು.-1000ರು.ವರೆಗೂ ಶುಲ್ಕ ಪಡೆಯುತ್ತಿದ್ದರು. ಹೀಗಾಗಿ 130 ದೋಣಿಗಳನ್ನು ಹೊಂದಿದ್ದ ಆ ನಾವಿಕ ಪ್ರತಿ



ದೋಣಿಯಿಂದ ಪ್ರತಿನಿತ್ಯ ಕನಿಷ್ಠ 50000ರು.ನಂತೆ ಕುಂಭಮೇಳದ ಅವಧಿಯಲ್ಲಿ ಭರ್ಜರಿ ಸಂಪಾದನೆ ಮಾಡಿದ್ದಾರೆ. ಎಲ್ಲಾ ಯಶಸ್ವಿನ ಕಥೆಗಳು ಸವಲತ್ತುಗಳೊಂದಿಗೆ ಪ್ರಾರಂಭವಾಗುವುದಿಲ್ಲ ಎಂಬುದು ಇಲ್ಲಿಯೂ ನಿಜವಾಗಿದೆ. ಕೆಲವು ಸಾಲ ಪಡೆದ ಹಣ, ನಿದ್ದೆಯಿಲ್ಲದ ರಾತ್ರಿಗಳು ಮತ್ತು ಸಾಧ್ಯತೆಗಳ ಮೇಲಿನ ಅಚಲ ನಂಬಿಕೆಯೊಂದೇ ಇಂದು ನಾವು ಓದುತ್ತಿರುವ ಯಶಸ್ವಿನ ಕಥೆಯ ಆಧಾರವಾಗಿದೆ. ಪ್ರಯಾಗ್‌ರಾಜ್‌ನ ಹೃದಯದಲ್ಲಿ, ಪಿಂಟು ಮಹರ ಮತ್ತು ಅವನ ಕುಟುಂಬವು 2025 ರ ಮಹಾಕುಂಭಕ್ಕೆ ಮುಂಚಿತವಾಗಿ ತಮ್ಮಲ್ಲಿದ್ದ ಎಲ್ಲವನ್ನೂ ಪಣಕ್ಕಿಟ್ಟು ನಂಬಿಕೆಯೊಂದನ್ನು ಮಾತ್ರ ತಮ್ಮ ಆಸ್ತಿಯನ್ನಾಗಿಸಿಕೊಂಡಿದ್ದರು. ಅವರು ಚಿನ್ನವನ್ನು ಅಡವಿಟ್ಟು, ಸಾಲಗಳನ್ನು ತೆಗೆದುಕೊಂಡು, ದೋಣಿಗಳ ಸಮೂಹವನ್ನು ನಿರ್ಮಿಸಲು ಅವಿರತವಾಗಿ ಕೆಲಸ ಮಾಡಿದರು. ಕುಂಭಮೇಳಕ್ಕಿಂತಲೂ ಮೊದಲು ಅಸ್ತವ್ಯಸ್ತಗೊಂಡಿದ್ದ ಅವರ ಜೀವನ 45 ದಿನಗಳಲ್ಲಿ ಪ್ರೇರಣಾದಾಯಿ ಕಥೆಯಾಗಿ ಹೊರಹೊಮ್ಮಿದೆ.ಈ ನಾವಿಕನ ಕುಟುಂಬ ಸಬಲಗೊಂಡಂತೆಯೇ ಉತ್ತರ ಪ್ರದೇಶ ರಾಜ್ಯವೂ 'ಕುಂಭಮೇಳಕ್ಕಾಗಿ ಮಾಡಿದ 7,500 ಕೋಟಿ ರು. ಹೂಡಿಕೆಯಿಂದ 3 ಲಕ್ಷ ಕೋಟಿಯಷ್ಟು ವಹಿವಾಟು ನಡೆದಿದೆ. ಕುಂಭದ ಅವಧಿಯಲ್ಲಿ ಹೋಟೆಲ್ ಉದ್ಯಮ 40 ಸಾವಿರ ಕೋಟಿ ರು., ಸಾರಿಗೆ ವಲಯ 1.5 ಲಕ್ಷ ಕೋಟಿ ರು., ಆಹಾರ ಹಾಗೂ ಇತರೆ ಅಗತ್ಯ ವಸ್ತುಗಳನ್ನು ಮಾರುವವರು ಒಟ್ಟು 33 ಸಾವಿರ ಕೋಟಿ ರು., ಸಂಪಾದಿಸಿದರು.


ಇಲ್ಲಿ ಗಮನಿಸಬೇಕಾದ ಎರಡು ಪ್ರಮುಖ ಸಂಗತಿಯೆಂದರೆ ಒಂದು ಧಾರ್ಮಿಕ ಸಂಗಮ ರಾಷ್ಟ್ರ ಮತ್ತು ರಾಜ್ಯದ ಅಭಿವೃದ್ಧಿಯ ಚಿತ್ರಣವನ್ನು ಬದಲಿಸಬಹುದು. ಹಾಗೆಯೇ ಎಲ್ಲಾ ಕೆಲಸಕ್ಕೂ ಅದರದ್ದೇ ಆದ ಘನತೆ ಇದೆ ಎನ್ನುವುದನ್ನು ಪದೇ ಪದೇ ಕೇಳುವ ನಾವು ನಮ್ಮ ಮನಸ್ಸಿನ ಮೂಲೆಯಲ್ಲಿ ಇಂದಿಗೂ ಕೆಲವು ಕೆಲಸಗಳನ್ನು ಕೀಳಾಗಿ ನೋಡುತ್ತಿರಬಹುದು. ಆದರೆ ಮಾಡುವ ಕೆಲಸದಲ್ಲಿ ನಿಷ್ಠೆ ಮತ್ತು ಸಮಯಕ್ಕೆ ಸರಿಯಾಗಿ ತೆಗೆದುಕೊಳ್ಳುವ ನಿರ್ಧಾರಗಳು ನಮಗೂ ಒಳ್ಳೆಯ ದಿನಗಳನ್ನು ತಂದುಕೊಡಬಲ್ಲದು ಎನ್ನುವುದಕ್ಕೆ ಅವರೇ ಪ್ರೇರಣೆ.

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 25th MARCH 2025
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2024-2026 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2024-26
FORTNIGHTLY 01-04-2025



## ರಾಷ್ಟ್ರೀಯ ಸ್ವಯಂಸೇವಕ ಸಂಘವೆಂಬ ಪವಿತ್ರ ಸಂಘಟನೆಯಿಂದ ನನ್ನ ಜೀವನಕ್ಕೆ ಸಂಸ್ಕಾರ ದೊರೆಯಿತು: ಪ್ರಧಾನಿ ನರೇಂದ್ರ ಮೋದಿ



ಪ್ರಧಾನಿ ನರೇಂದ್ರ ಮೋದಿ ಅವರು ಇತ್ತೀಚೆಗೆ ಅಮೇರಿಕಾದ ಪೋಡ್‌ಕ್ಯಾಸ್ಟರ್ ಹಾಗೂ ಸಂಶೋಧಕ ವಿಜ್ಞಾನಿ ಲೆಕ್ಸ್ ಫ್ರೀಡ್‌ಮನ್ ಅವರಿಗೆ ನೀಡಿದ ಸಂದರ್ಶನದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕುರಿತು ಮೆಚ್ಚುಗೆ ವ್ಯಕ್ತಪಡಿಸಿ, ಅದರ ಸೇವಾಕಾರ್ಯಗಳ ಕುರಿತು ಶ್ಲಾಘಿಸಿದ್ದಾರೆ.

ಸಂದರ್ಶನದಲ್ಲಿ ಮಾತನಾಡಿದ ಪ್ರಧಾನಿ ಮೋದಿ "ರಾಷ್ಟ್ರೀಯ ಸ್ವಯಂಸೇವಕ ಸಂಘದ ಶಾಖೆಯಲ್ಲಿ ಹೇಳಿಕೊಡುತ್ತಿದ್ದ ದೇಶಭಕ್ತಿಯ ಗೀತೆಗಳು ನನ್ನ ಮನಸ್ಸಿಗೆ ತುಂಬಾ ಖುಷಿ ಕೊಡುತ್ತಿತ್ತು. ಹೀಗೆ ನಾನು ಸಂಘಕ್ಕೆ ಬಂದೆ. ಸಂಘದ ಸಂಸ್ಕಾರ ಅಂತೂ ಸಿಕ್ಕಿತು. ಏನಾದರೂ ಯೋಚಿಸಿ ಅಥವಾ ಕೆಲಸ ಮಾಡಿ. ಒಂದು ವೇಳೆ ಓದುತ್ತಿದ್ದರೆ ಚೆನ್ನಾಗಿ ಓದಬೇಕು, ದೇಶಕ್ಕೆ ಸೇವೆ ಸಲ್ಲಿಸಬೇಕು. ವ್ಯಾಯಾಮ ಮಾಡುತ್ತಿದ್ದರೆ ಚೆನ್ನಾಗಿ ವ್ಯಾಯಾಮ ಮಾಡಬೇಕು. ವ್ಯಾಯಾಮದ ಮೂಲಕ ಸದೃಢಗೊಂಡ ನನ್ನ ಶರೀರವೂ ದೇಶಕ್ಕೆ ಕೆಲಸ ಮಾಡಬೇಕು. ಇದು ಸಂಘದವರು ಶಾಖೆಯಲ್ಲಿ ಹೇಳಿಕೊಡುತ್ತಿದ್ದ ಪಾಠ."

"ಈಗ ಸಂಘ ಬೃಹತ್ ಸಂಘಟನೆಯಾಗಿದೆ. ಸಂಘಕ್ಕೆ 100 ವರ್ಷ ಪೂರ್ಣಗೊಂಡಿದ್ದು ಜಗತ್ತಿನಲ್ಲಿ ಇಷ್ಟು ದೊಡ್ಡ ಸ್ವಯಂಸೇವಕ ಸಂಘಟನೆಯ ಬಗ್ಗೆ ನಾನು ಎಲ್ಲೂ ಕೇಳಿಲ್ಲ. ಕೋಟ್ಯಾಂತರ ಜನ ಅದರ ಜೊತೆ ಸೇರಿಕೊಂಡಿದ್ದಾರೆ. ಆದರೆ ಸಂಘವನ್ನು ಅರ್ಥ ಮಾಡಿಕೊಳ್ಳುವುದು ಅಷ್ಟು ಸುಲಭವಲ್ಲ. ಸಂಘದ ಕೆಲಸವನ್ನು ಅರ್ಥೈಸಿಕೊಳ್ಳುವ ಪ್ರಯತ್ನ ಮಾಡಬೇಕು ಮತ್ತು ಸಂಘ ಸ್ವತಃ ನಾವು ಜೀವನದ ಉದ್ದೇಶ ಎಂದು ಯಾವುದನ್ನು ಹೇಳುತ್ತೇವೆಯೋ, ಆ ವಿಷಯದಲ್ಲಿ ನಿಮಗೆ ಉತ್ತಮ ಮಾರ್ಗದರ್ಶನ ತೋರಿಸುತ್ತದೆ. ಎರಡನೇಯದು ದೇಶವೇ ಎಲ್ಲವೂ ಆಗಿದೆ. ಜನಸೇವೆಯೇ ಪ್ರಭುಸೇವೆಯಾಗಿದೆ. ಇದು ಯಾವುದನ್ನು ನಮ್ಮ ವೇದಕಾಲದಲ್ಲಿ, ಋಷಿಮುನಿಗಳು, ವಿವೇಕಾನಂದರು ಹೇಳಿದ್ದರೋ, ಅದೇ ಮಾತಾಗಿದೆ. ಅದೇ ಮಾತನ್ನು ಸಂಘವೂ ಹೇಳುತ್ತದೆ. ಹಾಗೆಯೇ ಸಂಘದಿಂದ ನಮ್ಮಲ್ಲಿ ಏನು ಪರಿಣಾಮ ಆಗಿದೆ ಎಂದು ಕೇಳಿದರೆ ಸಮಾಜಕ್ಕಾಗಿ ಏನಾದರೂ ಮಾಡಬೇಕು ಎಂಬ ಪ್ರೇರಣೆ ಸಿಗುತ್ತದೆ ಎಂದು ಸ್ವಯಂಸೇವಕರು ಹೇಳುತ್ತಾರೆ. ಇಂದು ಅಂತಹ ಕೆಲಸ ದೊಡ್ಡ ಮಟ್ಟದಲ್ಲಿ ನಡೆಯುತ್ತಿದೆ."

"ಕೆಲವು ಸ್ವಯಂಸೇವಕರು ಸೇವಾಭಾರತಿ ಹೆಸರಿನ ಸಂಘಟನೆ ಸ್ಥಾಪನೆ ಮಾಡಿದ್ದಾರೆ. ಈ ಸೇವಾಭಾರತಿ ಬಡವರ ಜಾಗಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಆ ಪ್ರದೇಶಗಳಿಗೆ ಅವರು ಸೇವಾಬಸ್ತಿ ಎಂದು ಕರಿಯುತ್ತಾರೆ. 1.25 ಲಕ್ಷದಷ್ಟು ಸೇವಾಪ್ರಕಲ್ಪಗಳನ್ನು ಅವರು ನಡೆಸುತ್ತಾರೆ. ಹಾಗೆಯೇ ಯಾವುದೇ ಸರ್ಕಾರದ ಸಹಾಯವಿಲ್ಲದೆ ಕೇವಲ ಸಮಾಜದ ಸಹಾಯದಿಂದ ಅಲ್ಲಿಗೆ ಹೋಗುವುದು, ಸಮಯ ನೀಡುವುದು, ಮಕ್ಕಳನ್ನು ಓದಿಸುವುದು, ಅವರ ಆರೋಗ್ಯದ ಬಗ್ಗೆ ಯೋಚಿಸುವಂತಹ ಕೆಲಸಗಳನ್ನು ಮಾಡುತ್ತಾರೆ. ಸೇವಾಬಸ್ತಿಯವರನ್ನು ಸಂಸ್ಕಾರವಂತರನ್ನಾಗಿಸುವುದು, ಅಲ್ಲಿನ ಪ್ರದೇಶಗಳಲ್ಲಿ ಸ್ವಚ್ಛತೆಯ ಕೆಲಸ ಸೇರಿದಂತೆ ಅನೇಕ ಸವಾಲಿನ ಕೆಲಸಗಳನ್ನು ಮಾಡುತ್ತಾರೆ. ಹಾಗೆಯೇ ಇಂತಹ ಸವಾಲಿನ ಕೆಲಸ ಸಣ್ಣ ಸಂಖ್ಯೆಯಲ್ಲಿಲ್ಲ. ಇನ್ನೂ ಕೆಲವು ಸ್ವಯಂಸೇವಕರಿದ್ದಾರೆ. ಅವರು ವನವಾಸಿ ಕಲ್ಯಾಣ ಆಶ್ರಮ ನಡೆಸುತ್ತಾರೆ. ಕಾಡಿನಲ್ಲಿ ಬುಡಕಟ್ಟು ಜನಗಳ ಜೊತೆಗೇ ಜೀವಿಸುತ್ತಾ ಸೇವೆ ಸಲ್ಲಿಸುತ್ತಾರೆ. 70000ಕ್ಕೂ ಹೆಚ್ಚು ಏಕಲ್ ವಿದ್ಯಾಲಯ (One Teacher One School) ನೆಡೆಸುತ್ತಾರೆ. ಈ ಕಾರ್ಯಕ್ಕೆ ಅಮೆರಿಕದಲ್ಲಿನ ಕೆಲವರು ತಮ್ಮ ದಿನನಿತ್ಯದ ಖರ್ಚನ್ನು ಸ್ವಲ್ಪ ಕಡಿಮೆಗೊಳಿಸಿ ಉಳಿಸಿದ ಹಣವನ್ನು ಏಕಲ್ ವಿದ್ಯಾಲಯದ ನಿರ್ವಹಣೆಗಾಗಿ ನೀಡುತ್ತಾರೆ."

"ಕೆಲವು ಸ್ವಯಂಸೇವಕರು ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿ ತರಲು ವಿದ್ಯಾಭಾರತಿ ಹೆಸರಿನ ಸಂಘಟನೆ ತೆರೆದಿದ್ದಾರೆ. ಅವರು ಇಡೀ ದೇಶದಲ್ಲಿ ಸುಮಾರು 25000 ಶಾಲೆಗಳನ್ನು ನಡೆಸುತ್ತಾರೆ. ಲಕ್ಷಾಂತರ ವಿದ್ಯಾರ್ಥಿಗಳಿಗೆ ಅತಿ ಕಡಿಮೆ ಹಣದಲ್ಲಿ ಶಿಕ್ಷಣ ಸಿಗುವುದರ ಜೊತೆಗೆ ಸಂಸ್ಕಾರವೂ ಸಿಗುತ್ತಿದೆ. ಜೀವನದ ಎಲ್ಲ ಕ್ಷೇತ್ರಗಳಲ್ಲಿ ಮಹಿಳೆಯರಾಗಲಿ ಯುವಕರಾಗಲಿ ಕಾರ್ಮಿಕರ ಕ್ಷೇತ್ರಗಳಲ್ಲೂ ಸಂಘ ಕಾರ್ಯನಿರ್ವಹಿಸುತ್ತಿದೆ. ಭಾರತೀಯ ಮಜ್ದೂರ್ ಸಂಘದ 55000 ಯೂನಿಯನ್ ಇದೆ ಮತ್ತು ಕೋಟಿ ಮಂದಿ ಸದಸ್ಯರಿದ್ದಾರೆ. ಜಗತ್ತಿನಲ್ಲಿ ಇಷ್ಟು ದೊಡ್ಡ ಕಾರ್ಮಿಕ ಸಂಘ ಇನ್ನೆಲ್ಲೂ ಇಲ್ಲ. ಎಡಪಂಥಿಯರು ಕಾರ್ಮಿಕ ಚಳುವಳಿಗೆ ಬಲ ನೀಡಿದರು ಎಂದು ಕೆಲವರು ಹೇಳುತ್ತಾರೆ. ಆದರೆ ಅವರ ಕಾರ್ಮಿಕ ಚಳುವಳಿಯ ಘೋಷಣೆ 'ಜಗತ್ತಿನ ಕಾರ್ಮಿಕರೆಲ್ಲ ಒಂದಾಗಿ' (Workers of the World Unite). ಆದರೆ ಆರೆಸ್ಸೆಸ್ ಸ್ವಯಂಸೇವಕರೊಂದಿಗೆ ಬೆಳೆದ ಕಾರ್ಮಿಕ ಸಂಘ 'ಕಾರ್ಮಿಕರು ಜಗತ್ತನ್ನು ಒಗ್ಗೂಡಿಸುತ್ತಾರೆ' (Workers Unite the World). ಈ ವಾಕ್ಯಗಳ ರಚನೆಯಲ್ಲಿ ಬಹಳ ವ್ಯತ್ಯಾಸವಿಲ್ಲ ಆದರೆ ಬಹುದೊಡ್ಡ ವೈಚಾರಿಕ ಬದಲಾವಣೆ ಇದೆ. ಇದು ಸಂಘದ ಸಂಪರ್ಕದಿಂದ ಬಂದ ಜನರು ತಮ್ಮ ರುಚಿ ಪ್ರಕೃತಿಗೆ ಪ್ರವೃತ್ತಿಗೆ ಅನುಗುಣವಾಗಿ ಕೆಲಸ ಮಾಡುವ ರೀತಿ. ಯಾವಾಗ ಇವರ ಕೆಲಸಗಳನ್ನು ಹತ್ತಿರದಿಂದ ನೋಡುತ್ತೀವೆಯೋ ಆಗ ನಿಮಗೆ 100 ವರ್ಷದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘವು ಸಮರ್ಪಿತ ಭಾವದೊಂದಿಗೆ, ಸಾಧಕನ ಹಾಗೆ ಮಾಡಿದ ಕಾರ್ಯದ ಅರಿವಾಗುತ್ತದೆ. ನನ್ನ ಸೌಭಾಗ್ಯವೆಂದರೆ ಅಂತಹ ಪವಿತ್ರ ಸಂಘಟನೆಯಿಂದ ನನ್ನ ಜೀವನಕ್ಕೆ ಸಂಸ್ಕಾರ ಸಿಕ್ಕಿದೆ" ಎಂದು ಹೇಳಿದರು.

## ಮಾರಿಷಸ್ ಅಧ್ಯಕ್ಷರಿಗೆ ಮಹಾಕುಂಭದ ಗಂಗಾಜಲ ಉಡುಗೊರೆ ನೀಡಿದ ಪ್ರಧಾನಿ ಮೋದಿ



ಪ್ರಧಾನಿ ನರೇಂದ್ರ ಮೋದಿ ಮಾರಿಷಸ್ ಅಧ್ಯಕ್ಷ ಧರಮ್ ಗೋಖೂಲ್ ಅವರನ್ನು ಭೇಟಿ ಮಾಡಿ ಮಹಾ ಕುಂಭದ ಗಂಗಾಜಲವನ್ನು ಉಡುಗೊರೆಯಾಗಿ ನೀಡಿದರು. ಅಧ್ಯಕ್ಷ ಗೋಖೂಲ್ ಅವರನ್ನು ಭೇಟಿ ಮಾಡುವ ಮೊದಲು, ಪ್ರಧಾನಿ ಮೋದಿ, ಮಾರಿಷಸ್ ಪ್ರಧಾನಿ ನವೀನ್‌ಚಂದ್ರ ರಾಮಗೂಲಂ ಅವರನ್ನು ಭೇಟಿ ಮಾಡಿದರು ಮತ್ತು ಇಬ್ಬರೂ ನಾಯಕರು ಸರ್ ಸೀವೂಸಾಗುರ್ ರಾಮಗೂಲಂ ಸಸ್ಯೋದ್ಯಾನದಲ್ಲಿ ಸಸಿ ನೆಟ್ಟರು. ಜನವರಿ 13 ರಿಂದ ಫೆಬ್ರವರಿ 26 ರವರೆಗೆ ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ಮಹಾ ಕುಂಭಮೇಳವು ಗಂಗಾ, ಯಮುನಾ ಮತ್ತು ಪೌರಾಣಿಕ ಸರಸ್ವತಿ ನದಿಗಳ ಸಂಗಮದಲ್ಲಿ ಪವಿತ್ರ ಸ್ನಾನ ಬೃಹತ್ ವೈಭವಕ್ಕೆ ಸಾಕ್ಷಿಯಾಯಿತು. ಅದರ ಬೆನ್ನಲ್ಲೇ ಪ್ರಧಾನಿ ಅವರ ಮಾರಿಷಸ್ ಭೇಟಿ ಮತ್ತು ಉಡುಗೊರೆ ಇದು ಭಾರತ ಮತ್ತು ಮಾರಿಷಸ್‌ನ ಬಲವಾದ ಸಂಬಂಧವನ್ನು ತೋರಿಸುತ್ತದೆ.

## ನಿಖರ ದಾಖಲೆಗಳಿಲ್ಲದೆ ಭಾರತ ಪ್ರವೇಶಿಸಿದರೆ 5 ವರ್ಷ ಜೈಲು : ಮಸೂದೆಗೆ ಚಿಂತನೆ

ಭಾರತ ಸರ್ಕಾರವು ಲೋಕಸಭೆಯಲ್ಲಿ ವಲಸೆ ಮತ್ತು ವಿದೇಶಿಯರ ಮಸೂದೆ, 2025 ಅನ್ನು ಪರಿಚಯಿಸಿದೆ. ಇದು ವಲಸೆ ಕಾನೂನುಗಳನ್ನು ಸುಗಮಗೊಳಿಸಲು, ರಾಷ್ಟ್ರೀಯ ಭದ್ರತೆಯನ್ನು ಬಲಪಡಿಸಲು ಮತ್ತು ಉಲ್ಲಂಘನೆಗಳಿಗೆ ಕಠಿಣ ದಂಡವನ್ನು ವಿಧಿಸಲು, ಐದು ವರ್ಷ ಸಜೆ ವಿಧಿಸಲು ಉದ್ದೇಶಿಸಿರುವ ಮಸೂದೆಯಾಗಿದೆ. ಈ ಮಸೂದೆಯು ವಸಾಹತುಶಾಹಿ ಯುಗದ ನಾಲ್ಕು ಕಾನೂನುಗಳನ್ನು, ವಿದೇಶಿಯರ ಕಾಯ್ದೆ, 1946 ಮತ್ತು ಪಾಸ್‌ಪೋರ್ಟ್ (ಭಾರತಕ್ಕೆ ಪ್ರವೇಶ) ಕಾಯ್ದೆ, 1920 ಸೇರಿದಂತೆ, ಒಂದೇ, ಆಧುನಿಕ ಕಾನೂನು ಚೌಕಟ್ಟನ್ನು ರಚಿಸಲು ಪ್ರಸ್ತಾಪಿಸುತ್ತದೆ. ಭಾರತದ ಸಮಗ್ರತೆಗೆ ಬೆದರಿಕೆಯನ್ನುಂಟುಮಾಡುವ ಯಾವುದೇ ವಿದೇಶಿಯರಿಗೆ ಪ್ರವೇಶ ಅಥವಾ ಉಳಿಯಲು ಅನುಮತಿಯನ್ನು ನಿರಾಕರಿಸಲಾಗುತ್ತದೆ ಎಂದು ಹೇಳುತ್ತದೆ. ವಲಸೆ ಕಾನೂನುಗಳನ್ನು ಉಲ್ಲಂಘಿಸುವ ಶಂಕೆಯಿದ್ದರೆ ವಾರಂಟ್ ಇಲ್ಲದೆ ವ್ಯಕ್ತಿಗಳನ್ನು ಬಂಧಿಸುವ ಅಧಿಕಾರವನ್ನು ವಲಸೆ ಅಧಿಕಾರಿಗಳು ಹೊಂದಿರುತ್ತಾರೆ. ಹೆಚ್ಚುವರಿಯಾಗಿ, ವಿದೇಶಿಯರು ಆಗಮನದ ನಂತರ ನೋಂದಾಯಿಸಿಕೊಳ್ಳಬೇಕು ಮತ್ತು ಅವರ ಚಲನವಲನಗಳು, ಹೆಸರು ಬದಲಾವಣೆಗಳು ಮತ್ತು ಕೆಲವು ಪ್ರದೇಶಗಳಿಗೆ ಪ್ರವೇಶವನ್ನು ನಿರ್ಬಂಧಿಸಬಹುದು. ಭಾರತಕ್ಕೆ ಪ್ರವೇಶಿಸುವ ಅಥವಾ ಹೊರಡುವ ಎಲ್ಲಾ ವಿದೇಶಿಯರು ಮಾನ್ಯವಾದ ಪಾಸ್‌ಪೋರ್ಟ್ ಮತ್ತು ವೀಸಾವನ್ನು ಹೊಂದಿರಬೇಕು. ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಂಗಳಂತಹ ಸಂಸ್ಥೆಗಳು ತಮ್ಮ ಆರೈಕೆಯಲ್ಲಿರುವ ವಿದೇಶಿ ಪ್ರಜೆಗಳ ಬಗ್ಗೆ ವಲಸೆ ಅಧಿಕಾರಿಗಳಿಗೆ ವರದಿ ಮಾಡಬೇಕು.




## ಯುನೆಸ್ಕೋ ಪಟ್ಟಿ ಸೇರಿದ ಮಧ್ಯಪ್ರದೇಶದ ನಾಲ್ಕು ಐತಿಹಾಸಿಕ ತಾಣಗಳು

ಮಧ್ಯಪ್ರದೇಶದ ನಾಲ್ಕು ಐತಿಹಾಸಿಕ ತಾಣಗಳನ್ನು ಯುನೆಸ್ಕೋದ ವಿಶ್ವ ಪರಂಪರೆಯ ತಾಣಗಳ ತಾತ್ಕಾಲಿಕ ಪಟ್ಟಿಯಲ್ಲಿ ಸೇರಿಸಲಾಗಿದೆ. ಅವುಗಳೆಂದರೆ: ಅಶೋಕನ ಶಾಸನ ತಾಣಗಳು, ಚೌಸತ್ ಯೋಗಿನಿ ದೇವಾಲಯಗಳು, ಗುಪ್ತರ ಕಾಲದ ದೇವಾಲಯಗಳು ಮತ್ತು ಬುಂದೇಲರ ಅರಮನೆ-ಕೋಟೆಗಳು. ಮೌರ್ಯರು ನಿರ್ಮಿಸಿದ ಮಾರ್ಗಗಳ ಉದ್ದಕ್ಕೂ ಇರುವ ಅಶೋಕನ ಶಾಸನ ತಾಣಗಳು ಭಾರತದ ಆರಂಭಿಕ ಲಿಖಿತ ದಾಖಲೆಗಳಾಗಿವೆ. ಬೌದ್ಧಧರ್ಮ, ಆಡಳಿತ ಮತ್ತು ನೀತಿಶಾಸ್ತ್ರದ ಕುರಿತು ಚಕ್ರವರ್ತಿ ಅಶೋಕನ ಸಂದೇಶಗಳನ್ನು ಬಹಿರಂಗಪಡಿಸುವ ಶಿಲಾ ಮತ್ತು ಸ್ತಂಭ ಶಾಸನಗಳು 2,200 ವರ್ಷಗಳಿಗೂ ಹೆಚ್ಚು ಕಾಲದಿಂದ ಸಂರಕ್ಷಿಸಲ್ಪಟ್ಟಿವೆ. 9 ರಿಂದ 12ನೇ ಶತಮಾನಗಳ ಹಿಂದಿನ ಚೌಸತ್ ಯೋಗಿನಿ ದೇವಾಲಯಗಳು, ವಿಶಿಷ್ಟ ವೃತ್ತಾಕಾರದ, ತೆರೆದ ಗಾಳಿಯ ವಿನ್ಯಾಸಗಳು, ಸಂಕೀರ್ಣವಾದ ಕಲ್ಲಿನ ಕೆತ್ತನೆಗಳು ಮತ್ತು ಆಳವಾಗಿ ಬೇರೂರಿರುವ ಆಧ್ಯಾತ್ಮಿಕ ಮಹತ್ವದೊಂದಿಗೆ ತಾಂತ್ರಿಕ ಸಂಪ್ರದಾಯಗಳನ್ನು ಸಾಕಾರಗೊಳಿಸುತ್ತವೆ, ಮಧ್ಯಪ್ರದೇಶದ ಖಜುರಾಹೊ, ಮೊರೆನಾ, ಜಬಲ್ಪುರ್, ಮಂದ್ಸೌರ್ ಮತ್ತು ಶಹದೋಲ್ ಮತ್ತು ಇತರ ರಾಜ್ಯಗಳಲ್ಲಿ ನೆಲೆಗೊಂಡಿವೆ. ರೈಸೇನ್ ಜಿಲ್ಲೆಯ ಸಾಂಚಿಯಲ್ಲಿರುವ ಗುಪ್ತ ದೇವಾಲಯಗಳು, ವಿದಿಶಾ ಜಿಲ್ಲೆಯ ಉದಯಗಿರಿ, ಪನ್ನಾ ಜಿಲ್ಲೆಯ ನಾಚ್ನಾ ದೇವಾಲಯ, ಕಟ್ನಿ ಜಿಲ್ಲೆಯ ತಿಗಾವಾ, ಸತ್ನಾ ಜಿಲ್ಲೆಯ ಭೂಮಾರ, ದಮೋಹ್ ಜಿಲ್ಲೆಯ ಸಕೋರ್, ಸಾಗರ್ ಜಿಲ್ಲೆಯ ದಿಯೋರಿ ಮತ್ತು ಗ್ವಾಲಿಯರ್ ಜಿಲ್ಲೆಯ ಪವಾಯ ಸೇರಿದಂತೆ ಉತ್ತರ ಭಾರತದ ಗುಪ್ತ ದೇವಾಲಯಗಳು ದೇವಾಲಯ ವಾಸ್ತುಶಿಲ್ಪದಲ್ಲಿ ಒಂದು ಮಹತ್ವದ ತಿರುವಾಗಿವೆ.

ಓದುಗರೇ ಗಮನಿಸಿ
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು-560 004. ಮೊಬೈಲ್: 97391 83021

ಸಂಪಾದಕ-ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು-04. ಸಂಪಾದಕೀಯ : ಮೊ. 87225 52497
ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು-19.